ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 18 | ಜುಲೈ 15, 1979 | 40 ಪೈಸೆ

ರಾಜಕೀಯ ಸ್ಕೈಲ್ಯಾಬ್

ಸಂಪಾದಕೀಯ

ಅಮೆರಿಕ ಸಂಯುಕ್ತ ಸಂಸ್ಥಾನವು ಈ ಹಿಂದೆ ಅಂತರಿಕ್ಷಕ್ಕೆ ಕಳುಹಿಸಿದ್ದ ಸ್ಕೈಲ್ಯಾಬ್ (ಬಾಹ್ಯಾಕಾಶ ಪ್ರಯೋಗಾಲಯ) ಹಿಂದೂ ಮಹಾಸಾಗರಕ್ಕೆ ಬೀಳುವುದರೊಂದಿಗೆ ಜಗತ್ತಿನಾದ್ಯಂತ ಕುತೂಹಲ ಮತ್ತು ಭಯಭೀತಿಗಳನ್ನುಂಟುಮಾಡಿದ್ದ ಒಂದು ಘಟನೆಯು ಮುಗಿದಂತಾಗಿದೆ. ವೈಜ್ಞಾನಿಕವಾಗಿ ನೋಡಿದರೆ ಸ್ಕೈಲ್ಯಾಬ್‌ನ ಪತನವಾಗುವುದರಿಂದ ಉಂಟಾಗಬಹುದಾಗಿದ್ದ ಅಪಾಯ ಅತೀ ಅಲ್ಪ ; ಅಪಾಯದ ಸಂಭವವು 600 ಮಿಲಿಯದಲ್ಲಿ ಒಂದು ಅಂಶವಾಗಿತ್ತು. ಒಂದು ವಾಹನ ಅಪಘಾತದಲ್ಲಿ ಸಾಯುವ ಸಂಭವಕ್ಕಿಂತ ಎಷ್ಟೆಷ್ಟೋ ಪಾಲು ಕಡಿಮೆ ಸಂಭವವಿದ್ದ ಈ ಘಟನೆಗೆ ಅತ್ಯಂತ ಮಹತ್ವ ಮತ್ತು ಪ್ರಚಾರ ಕೊಟ್ಟು ಇಷ್ಟು ಗಲಿಬಿಲಿ ಮತ್ತು ಭಯದ ವಾತಾವರಣವನ್ನುಂಟುಮಾಡುವುದು ಅಗತ್ಯವಿರಲಿಲ್ಲ. ಆದರೆ ಇದರೊಂದಿಗೆ ಬಾಹ್ಯಾಕಾಶ ಪ್ರಯೋಗದೊಂದಿಗೆ ಇರುವ ಅಪಾಯಗಳ ಬಗ್ಗೆಯೂ ಗಮನ ಹರಿಸಬೇಕಾಗಿದೆ. ವಿಜ್ಞಾನಯುಗದ ಈ ಕಾಲದಲ್ಲಿ ಯೋಗದ ಬಲದಿಂದ ಮತ್ತು ಪೂಜೆ ಪ್ರಾರ್ಥನೆಗಳಿಂದ ಸ್ಕೈಲ್ಯಾಬನ್ನು ಭೂಮಿಯ ಪಥದಿಂದ ದೂರ ಕೊಂಡೊಯ್ಯುವೆವೆಂದು ಯೋಗಿಗಳು ಮತ್ತು ಧರ್ಮಾಂಧರು ಕೊಚ್ಚಿಕೊಂಡಿರುವುದಂತೂ ತೀರಾ ಹಾಸ್ಯಾಸ್ಪದ.

ಅಮೆರಿಕದ ಸ್ಕೈಲ್ಯಾಬ್ ಧರೆಗಿಳಿಯುವ ಸಂದರ್ಭದಲ್ಲಿ ಭಾರತದೇಶದ ರಾಜಕೀಯ ಸ್ಕೈಲ್ಯಾಬ್ ಎತ್ತ ಕಡೆ ಬೀಳುತ್ತದೆ ಎಂಬುದು ಅನಿಶ್ಚಿತವಾಗಿದೆ. ಕರ್ನಾಟಕ ಕಾಂಗ್ರೆಸ್ಸಿನ ಉದಯ ಮತ್ತು ಜುಲೈ 4ರ ಸಮಾನಾಭಿಪ್ರಾಯ ಕಾಂಗ್ರೆಸ್ಸಿಗರ ಅಧಿವೇಶನದ ಹಿನ್ನೆಲೆಯಲ್ಲಿ ರಾಷ್ಟ್ರದಾದ್ಯಂತ ರಾಜಕೀಯ ಶಕ್ತಿ ಸಂಬಂಧಗಳು ಬದಲಾಗುವ ನಿರೀಕ್ಷೆಯಲ್ಲಿರುವಾಗ, ಜನತಾಪಕ್ಷದಿಂದ ರಾಜನಾರಾಯಣ ಮತ್ತು ಅವರ ಬೆಂಬಲಿಗರು ಹೊರಬರುತ್ತಲಿದ್ದು ಈಗಾಗಲೇ ಲೋಕಸಭೆಯಲ್ಲಿ ಜನತಾಪಕ್ಷದ ಸದಸ್ಯರ ಸಂಖ್ಯೆಯು ಕೇವಲ 248ಕ್ಕೆ ಇಳಿದಿದೆ. ಜನತಾ ಪಕ್ಷಕ್ಕೆ ಇದ್ದ ಸ್ಪಷ್ಟ ಬಹುಮತವು ಹೋಗಿದೆ. ಮಂತ್ರಿಗಳಾದ ರಬಿರಾಯ್ ಮತ್ತು ಮಿಶ್ರಾ ಅವರ ರಾಜಿನಾಮೆಯ ಸುದ್ದಿ ಈಗ ತಾನೆ ಬಂದಿದೆ. ಸ್ವರಣಸಿಂಗ್ ಕಾಂಗ್ರೆಸ್ ಮಂಡಿಸಿರುವ ಅವಿಶ್ವಾಸ ನಿರ್ಣಯದ ಹಿನ್ನೆಲೆಯಲ್ಲಿ, ಸದ್ಯದ ರಾಜಕೀಯ ಬೆಳವಣಿಗೆಯನ್ನು ನೋಡಿದಲ್ಲಿ

[ಕಡೆಯ ಪುಟ ನೋಡಿ]

ರಾಜ್ಯದ ಪ್ರಸ್ತುತ ರಾಜಕೀಯ ಬೆಳವಣಿಗೆ ಬಗ್ಗೆ ಸೆಕ್ರೆಟಾರಿಯಟ್ ಹೇಳಿಕೆ

ಜುಲೈ 4ರಂದು ಸೇರಿದ ಸಮಾನ ಅಭಿಪ್ರಾಯವುಳ್ಳ ಕಾಂಗ್ರೆಸ್ಸಿಗರ ಸಮಾವೇಶದ ಹಿನ್ನೆಲೆಯಲ್ಲಿ ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿ ಬಗ್ಗೆ ಅವಲೋಕಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿ ಸೆಕ್ರೆಟಾರಿಯಟ್ 7-7-79ರಂದು ಸೇರಿ ಈ ಕೆಳಗಿನ ಅಭಿಪ್ರಾಯ ಮಾಡಿತು. "ದೇವರಾಜಅರಸು ಅವರ ದಿಟ್ಟ ನಿಲುಮೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮೆಚ್ಚಿದೆ ಮತ್ತು ಇಂದಿರಾಗಾಂಧಿ ಸರ್ವಾಧಿಕಾರದ ವಿರುದ್ಧದ ಹೋರಾಟವನ್ನು ಸ್ವಾಗತಿಸಿದೆ".

"ಜುಲೈ ನಾಲ್ಕರ ಸಮಾವೇಶ ಮತ್ತು ಬೆಳವಣಿಗೆಯು ಕೇವಲ ಸಮಾನ ಅಭಿಪ್ರಾಯವುಳ್ಳ ಕಾಂಗ್ರೆಸ್ಸಿಗರನ್ನು ಒಟ್ಟು ಸೇರಿಸುವಷ್ಟರಲ್ಲೇ ಕೊನೆಗೊಳ್ಳದೆ, ಪ್ರಜಾಪ್ರಭುತ್ವವನ್ನು ಶಕ್ತಿಸುವ ಮತ್ತು ಸರ್ವಾಧಿಕಾರ ಹಾಗೂ ಕೋಮು ಶಕ್ತಿಗಳ ವಿರುದ್ಧ ಹೋರಾಡುವ ಶಕ್ತಿಗಳ ಹೊಸ ಮತ್ತು ಪುನರ್ ಸಂಬಂಧವನ್ನು ರೂಪಿಸಲು ಸಹಾಯವಾಗಲೆಂದು ಸೆಕ್ರೆಟಾರಿಯಟ್ ಬಯಸುತ್ತದೆ.

ದೇವರಾಜ ಅರಸು ಮತ್ತು ಇಂದಿರಾ ಗಾಂಧಿ ನಡುವಿನ ತಿಕ್ಕಾಟದ ಪರಿಣಾಮವಾಗಿ ಕರ್ನಾಟಕ ಕಾಂಗ್ರೆಸ್ ಉದಯವಾಗಿದ್ದು, ಇದರಿಂದ ರಾಷ್ಟ್ರಕ್ಕೆ ಪ್ರಯೋಜನವಾಗಬೇಕಿದ್ದರೆ ಅರಸು ಅವರ ಸರಕಾರವು ಕಾರ್ಮಿಕ ವಿರೋಧಿ ಮತ್ತು ಜನತೆಯ ವಿರೋಧಿ ಧೋರಣೆಗಳನ್ನು ಕೈಬಿಡಬೇಕು. ಅರಸು ಅವರ ಸರಕಾರವು ಜನತೆಗೆ ಸಂಪೂರ್ಣ ಪ್ರಜಾಪ್ರಭುತ್ವ ಹಕ್ಕುಗಳನ್ನು ಕೊಟ್ಟರೆ ಮಾತ್ರ ಇಂದಿರಾಗಾಂಧಿಯ ಸರ್ವಾಧಿಕಾರತ್ವದ ವಿರುದ್ಧ ಶ್ರೀ ಅರಸು ಅವರು ನಡೆಸಿದ ಹೋರಾಟವು ಅರ್ಥಪೂರ್ಣವಾಗಬಲ್ಲುದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯಟ್ ಅಭಿಪ್ರಾಯಪಡುತ್ತದೆ. ●

ಒಂದು ವರ್ಷದಲ್ಲಿ ನಮ್ಮ ಸಾಧನೆ, ನಮ್ಮ ಮುಂದಿರುವ ಕರ್ತವ್ಯಗಳು

ಎಂ. ಕೆ. ಭಟ್

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಪುನರ್ ಸಂಘಟನೆಯಾಗಿ ಜುಲೈ 13ರಂದಿಗೆ ಒಂದು ವರ್ಷವಾಗುವುದು. ಪಕ್ಷದ ರಾಜ್ಯಘಟಕದ ಮತ್ತು ಸಾಮೂಹಿಕ ಸಂಘಟನೆಗಳ ಉನ್ನತ ಸ್ಥಾನಗಳಲ್ಲಿದ್ದು, ಈಗ ಪಕ್ಷದಿಂದ ಹೊರತಳ್ಳಲ್ಪಟ್ಟ ಕೆಲವರಲ್ಲಿದ್ದ ಸೈದ್ಧಾಂತಿಕ ಗೊಂದಲ ಮತ್ತು ಅವರ ತಪ್ಪು ಸಂಘಟನಾ ಧೋರಣೆಗಳಿಂದ ರಾಜ್ಯದಲ್ಲಿ ಪಕ್ಷದ ಅಸ್ತಿತ್ವಕ್ಕೆ ಧಕ್ಕೆ ಬಂದಿತ್ತು. ಕಾರ್ಮಿಕ ಚಳುವಳಿ ಮತ್ತು ಹಳ್ಳಿಯ ಬಡವರ ಹೋರಾಟಗಳಿಗೆ ನಾಯಕತ್ವವನ್ನೀಯಬೇಕಾಗಿದ್ದ ಸಿ.ಐ.ಟಿ.ಯು., ಕಿಸಾನ್‌ಸಭಾ ಸಂಘಟನೆಗಳು ಹಳಿತಪ್ಪುವಂತಾಗಿತ್ತು. ಪಕ್ಷದ ಪ್ರಭಾವವನ್ನು ಬೇರೆ ಬೇರೆ ಜನ ವಿಭಾಗ ಮತ್ತು ಪ್ರದೇಶಗಳಿಗೆ ಹಬ್ಬಿಸುವ ಮಾತಂತಿರಲಿ, ಇರುವ ಸಂಘಟನೆಗಳನ್ನೆ ಉಳಿಸಿಕೊಳ್ಳುವುದು ಅಸಾಧ್ಯ ಎಂಬ ಪರಿಸ್ಥಿತಿಗೆ ಬಂದಾಗ, ಬಹುಸಂಖ್ಯಾತ ಪಕ್ಷದ ಸದಸ್ಯರ ಅಭಿಪ್ರಾಯವನ್ನು ಅಂದಾಜು ಮಾಡಿ ಕೇಂದ್ರ ನಾಯಕತ್ವವು ಮಧ್ಯ ಪ್ರವೇಶಮಾಡಬೇಕಾಗಿ ಬಂತು. ಪಕ್ಷದ ರಾಜ್ಯ ಸಮಿತಿಯನ್ನು ಪುನರ್ ಸಂಘಟಿಸಿ, ಪಕ್ಷ ದ್ರೋಹ ಮಾಡಿದವರನ್ನು ಹೊರಹಾಕಲಾಯಿತು. ಪುನರ್ ಸಂಘಟನೆಯಾದ ಒಂದು ವರ್ಷದಲ್ಲಿ ಪಕ್ಷದ ಬೆಳವಣಿಗೆ, ಹೆಚ್ಚಾದ ಪ್ರಭಾವ, ಸಾಮೂಹಿಕ ಸಂಘಟನೆಗಳ ಬೆಳವಣಿಗೆ ಮತ್ತು ಇವುಗಳ ನೇತೃತ್ವದಲ್ಲಿ ನಡೆದ ಹೋರಾಟ, ಹೊಸ ವಿಭಾಗಗಳ ಸಂಘಟನೆ, ಪಕ್ಷದ ರಾಜಕೀಯ ಕರ್ತವ್ಯಗಳ ನಿರ್ವಹಣೆ ಮೊದಲಾದುವುಗಳನ್ನು ವೀಕ್ಷಿಸಿದಲ್ಲಿ ಕೇಂದ್ರ ನಾಯಕತ್ವವು ತೆಗೆದುಕೊಂಡ ಕ್ರಮಗಳು ಸರಿ ಮತ್ತು ಸಮಯೋಚಿತವಾಗಿವೆ ಎಂಬುದನ್ನು ತೋರಿಸಿಕೊಡುತ್ತವೆ.

ಹಿಂದೆ ಐದಾರು ವರ್ಷಗಳಲ್ಲಿ ಮಾಡಿದ್ದನ್ನು ಒಂದು ವರ್ಷದಲ್ಲಿ ಮಾಡಬೇಕಾಯಿತು. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಹಳಿ ತಪ್ಪಿದ್ದುವು. ಇವನ್ನು ಸರಿಪಡಿಸಿ ಮತ್ತೆ ಹಳಿಯ ಮೇಲೇರಿಸಿ ಓಡಿಸುವುದು ಮೊದಲ ಕೆಲಸವಾಗಿತ್ತು. ಪಕ್ಷದ ಪುನರ್ ಸಂಘಟನೆ, ಸಿ.ಐ.ಟಿ.ಯು. ರಾಜ್ಯ ಸಮ್ಮೇಳನ ಕಿಸಾನ್‌ಸಭಾ ರಾಜ್ಯ ಸಮ್ಮೇಳನ, ಮತ್ತು ವಿದ್ಯಾರ್ಥಿ ಫೆಡರೇಶನ್ ರಾಜ್ಯ ಸಮ್ಮೇಳನಗಳನ್ನು ನಡೆಸಿ ಚುರುಕಾಗಿ ಕೆಲಸ ಮಾಡುವ ಜವಾಬ್ದಾರಿಯುತ ನಾಯಕತ್ವವನ್ನು ಸ್ಥಾಪಿಸುವುದರ ಮೂಲಕ ಇದು ಸಾಧ್ಯವಾಯಿತು. ಅತೀ ಪ್ರಾಮುಖ್ಯ ವಿಭಾಗವಾದ ದುಡಿಯುವ ಮಹಿಳೆಯರ ಸಮಾವೇಶ ಮತ್ತು ಸಂಘಟನೆಯು ಒಂದು ದೊಡ್ಡ ಸಾಧನೆ. ರಾಜ್ಯದಲ್ಲಿ ಯುವಕರ ಸಂಘಟನೆ ಮಾಡುವ ಕೆಲಸವು ನಡೆಯುತ್ತಲಿದ್ದು, ಇನ್ನೊಂದೆರಡು ತಿಂಗಳುಗಳ ಕಾಲದಲ್ಲಿ ನಡೆಯಲಿರುವ ಸಮಾವೇಶದೊಂದಿಗೆ ಮುಖ್ಯ ವಿಭಾಗಗಳ ಸಂಘಟನೆಯಾದಂತಾಗುವುದು. ಪಕ್ಷದ ಸಾಮೂಹಿಕ ಸಂಘಟನೆಗಳೂ, ಬೇರೆ ಬೇರೆ ಘಟಕಗಳೂ ದಲಿತರ ಹೋರಾಟ ಮತ್ತು ಕಾರ್ಯಕ್ರಮಗಳಿಗೆ ಬೆಂಬಲವಿತ್ತಿರುವುದು ಉತ್ತಮ ಸೌಹಾರ್ದತೆಯನ್ನು ಬೆಳೆಸಿದೆ. ಶ್ರಮಜೀವಿಗಳ ಮತ್ತು ನೌಕರವರ್ಗಗಳ ಬೇರೆ ಬೇರೆ ವಿಭಾಗದಲ್ಲಿ ಪಕ್ಷದ ಪ್ರಭಾವ ಬೆಳೆಯುತ್ತಲಿದೆ.

ಬಹಳ ಕಾಲದಿಂದಲೂ ಅಪೇಕ್ಷೆಪಟ್ಟಂತೆ ಪಕ್ಷದ ವಾರಪತ್ರಿಕೆಯನ್ನು ಬೆಂಗಳೂರಿಗೆ ವರ್ಗಾಯಿಸಿ, ಅದನ್ನು ಉತ್ತಮಪಡಿಸುವುದರಲ್ಲೂ, ಹಿಂದಿಗಿಂತ ಬಹಳ ಹೆಚ್ಚಿಗೆ ಪ್ರತಿಗಳನ್ನು ಮಾರಾಟ ಮಾಡುವುದರಲ್ಲೂ ನಾವು ಯಶಸ್ವಿಯಾಗಿರುವೆವು. ಪಕ್ಷದ ಮತ್ತು ಪ್ರಗತಿಶೀಲ ಸಾಹಿತ್ಯ ಮಾರಾಟ ಮತ್ತು ಪ್ರಕಟಣೆಗೆ ಸಹಾಯವಾಗುವುದಕ್ಕಾಗಿ "ಪುಸ್ತಕಗಳ ಪ್ರಕಾಶನ ಮತ್ತು ಮಾರಾಟದ" ಕೇಂದ್ರವನ್ನು ಸ್ಥಾಪಿಸುವುದು ಸಾಧ್ಯವಾಗಿದೆ. ರಾಜ್ಯದಲ್ಲಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡು ಹೋಗುವುದು ಸಾಧ್ಯವಾಗಿದೆ. ಪ್ರಗತಿಶೀಲ ವಿಚಾರಧಾರೆಯುಳ್ಳ ಬುದ್ಧಿಜೀವಿಗಳಿಗೂ, ಜನತೆಯ ಹೋರಾಟಗಳಿಗೂ ಸಂಬಂಧ ಕಲ್ಪಿಸುವುದರಲ್ಲಿ ನಮ್ಮ ಪಾತ್ರವನ್ನು ವಹಿಸಲಾಗಿದೆ. ರಾಜ್ಯದ ರಾಜಕೀಯದಲ್ಲೂ, ಜನತೆಯ ದಿನನಿತ್ಯದ ಸಮಸ್ಯೆಗಳ ಬಗ್ಗೆಯೂ ಪಕ್ಷದ ಪ್ರತಿಕ್ರಿಯೆ ಬೆಳೆಯುತ್ತಿದ್ದು, ರಾಜ್ಯದ ರಾಜಕೀಯ ಭೂಪಟದಲ್ಲಿ ನಮ್ಮ ಪಕ್ಷದ ಹೆಸರು ಕಂಡುಬರುವಂತಾಗಿದೆ. ಕಳೆದ ಒಂದು ವರ್ಷದಲ್ಲಿ ರಾಜ್ಯದ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಸಿ. ಐ. ಟಿ. ಯು. ಪ್ರಮುಖ ಪಾತ್ರವನ್ನು ವಹಿಸಿದೆ. ಹಳೆಯ ಮೈಸೂರು ಭೂಸ್ವಾಧೀನ ಚಳುವಳಿ ಮತ್ತು ಇತರ ಅನೇಕ ಹೋರಾಟಗಳ ಮೂಲಕ ಪ್ರಾಂತ ರೈತ ಸಂಘದ ಪ್ರಭಾವವೂ, ಸಂಘಟನೆಯೂ ವ್ಯಾಪಕವಾಗಿ ಬೆಳೆಯುವ ಲಕ್ಷಣ ಕಂಡು ಬಂದಿದೆ.

ಇಷ್ಟೆಲ್ಲವನ್ನೂ ಒಂದು ವರ್ಷದಲ್ಲಿ ಸಾಧ್ಯವಾಗುವಂತೆ ಮಾಡುವುದರಲ್ಲಿ ಪಕ್ಷದ ಎಲ್ಲಾ ಘಟಕಗಳೂ, ಎಲ್ಲಾ ಸದಸ್ಯರುಗಳೂ, ಹಿತೈಷಿಗಳೂ ಮತ್ತು ಗೆಳೆಯರು ಬಹಳಷ್ಟು ಶ್ರಮಿಸಿರುವರು. ರಾಜ್ಯಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸುವುದರಲ್ಲಿ ಸಕ್ರಿಯವಾಗಿ ಭಾಗವಹಿಸಿರುವರು; ಹೊಸ ಸ್ಫೂರ್ತಿಯಿಂದ ದುಡಿದಿರುವರು. ಇದಕ್ಕಾಗಿ ಪಕ್ಷದ ರಾಜ್ಯಸಮಿತಿಯು ಇವರೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ.

[ಕಡೆಯ ಪುಟ ನೋಡಿ]

ಬಲಕಮ್ಯುನಿಸ್ಟ್ ಪಕ್ಷದ ಪತ್ರಿಕೆ ಕೆಂಬಾವುಟ ಕೇಳುತ್ತದೆ.......

ಪ. ಬಂಗಾಲದ ವಾಮರಂಗ ಸರ್ಕಾರ ಮಾಡಿದ್ದೇನು ?

ರಾಷ್ಟ್ರದ ಪ್ರತಿಷ್ಠಿತ ಹಾಗೂ ಪ್ರಖ್ಯಾತ ರಾಜಕೀಯ ವಿಮರ್ಶಕ ಶ್ರೀ ಬರುನ್ ಸೇನ್‌ಗುಪ್ತಾ ಅವರು, ಬೂರ್ಜ್ವ ವಾರಪತ್ರಿಕೆ 'ಸಂಡೆ'ಯ 79 ಜೂನ್ 24ರ ಸಂಚಿಕೆಯಲ್ಲಿ, ಪ. ಬಂಗಾಳ ವಾಮರಂಗ ಸರ್ಕಾರದ 2 ವರ್ಷದ ಆಡಳಿತವನ್ನು ವಿಶ್ಲೇಶಿಸಿ ಒಂದು ವಿಶೇಷ ವರದಿಯನ್ನು ಬರೆದಿದ್ದಾರೆ. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎಂಬ ನೀತಿಯುಳ್ಳ ಬಲ ಕಮ್ಯುನಿಸ್ಟ್ ಪಕ್ಷದ ನಮ್ಮ ಮಿತ್ರರಿಗೆ, ಬೂರ್ಜ್ವ ಪತ್ರಿಕೆಯೊಂದರ ವರದಿಯೇ ಸೂಕ್ತ ಉತ್ತರವೆಂದು ಭಾವಿಸಿ ಅದನ್ನು ಇಲ್ಲಿ ಅವರಿಗೂ ಮತ್ತು ನಮ್ಮ ವಾಚಕರಿಗೂ ಕೊಡುತ್ತಿದ್ದೇವೆ.

—ಸಂ.

ಪ. ಬಂಗಾಳ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ವಾಮರಂಗ ಸರ್ಕಾರವು ಅಧಿಕಾರಕ್ಕೆ ಬಂದು ಕಳೆದ 20ಕ್ಕೆ ಎರಡು ವರ್ಷಗಳು ಪೂರ್ಣಗೊಂಡಿವೆ. ಈ ಅಲ್ಪ ಅವಧಿಯಲ್ಲಿ ಅದರ ಜನಪ್ರಿಯತೆಯು ಆ ರಾಜ್ಯದ ಹಳ್ಳಿಯ ಬಡ ಜನತೆಯ ನಡುವೆ ಅಪಾರವಾಗಿ ಹೆಚ್ಚಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಘಟನಾ ಶಕ್ತಿಯು ಹಳ್ಳಿಯ ಬಡಜನರ ಮತ್ತು ಮಧ್ಯಮವರ್ಗದವರ ನಡುವೆ ಸುಮಾರು ನಾಲ್ಕು-ಐದು ಪಟ್ಟು ಹೆಚ್ಚಾಗಿದೆ. ಈ ಹಳ್ಳಿಗರಲ್ಲಿ ಅನೇಕ ಜನರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ... "ಅನೇಕವರ್ಷಗಳ ನಂತರ ನಮ್ಮ ರಾಜ್ಯದಲ್ಲಿ ನಮ್ಮದೇ ಆದ ಸರ್ಕಾರವಿದೆ"ಎಂದು: ಸಿ.ಪಿ.ಐ. (ಎಂ) ಪಕ್ಷವು ಹಳ್ಳಿಯ ಬಡಜನತೆಯ ನಡುವೆ ಈಗ ಕಾರ್ಯನಿರ್ವಹಿಸಿಕೊಂಡು ಹೋಗುತ್ತಿರುವಂತೆಯೇ ಬರುವ ಮೂರು ವರ್ಷಗಳೂ ಕೆಲಸ ಮಾಡಿದ್ದಾದಲ್ಲಿ ಅವರನ್ನು ಸಿ.ಪಿ.ಐ. (ಎಂ) ಅಧಿಕಾರದಿಂದ ವಜಾಮಾಡುವುದು ಯಾರಿಂದಲೂ ಸಾಧ್ಯವಾಗುವುದಿಲ್ಲ. ಯಾಕೆಂದರೆ, ಪ. ಬಂಗಾಳದ ಹಳ್ಳಿಗಳಲ್ಲಿ ಬಡಜನರೇ ಬಹುಸಂಖ್ಯಾತರಾಗಿದ್ದಾರೆ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರು ಈ ಬಡಜನತೆಯ ನಡುವೆಯೇ ಇದ್ದಾರೆ.

ಪ. ಬಂಗಾಳದ ವಾಮರಂಗ ಸರ್ಕಾರವು ಆರಂಭಿಸಿರುವ "ಆಹಾರಕ್ಕಾಗಿ ಉದ್ಯೋಗ"ಎಂಬ ಯೋಜನೆಯಿಂದ ತಮ್ಮ ಹೊಟ್ಟೆಗೆ ಅನ್ನವನ್ನೂ ಮತ್ತು ಖರ್ಚಿಗಾಗಿ ಸ್ವಲ್ಪಹಣವನ್ನೂ ದಿನನಿತ್ಯ ಪಡೆಯುತ್ತಿರುವ ರಾಜ್ಯದ ಗ್ರಾಮೀಣ ಬಡಜನತೆಯು ಸರ್ಕಾರದ ಜನಪರ ಕ್ರಮಗಳಿಂದ ಸಂತುಷ್ಟಗೊಂಡಿದೆ. ಪ್ರಸಕ್ತ ವರ್ಷದಲ್ಲೇ ವಾಮರಂಗ ಸರ್ಕಾರವು ತನ್ನ ರಾಜ್ಯದ ಬಡಜನತೆಗೆ 60 ಸಾವಿರ ಟನ್‌ಗಳಷ್ಟು ಗೋಧಿಯನ್ನು ಹಂಚಿದೆ. ಸರ್ಕಾರದ ಈ ಕ್ರಮದಿಂದಾಗಿ ಹಲವು ವರ್ಷಗಳ ನಂತರ ಆ ರಾಜ್ಯದ ಪ್ರತಿಯೊಬ್ಬ ಬಡವನ ಹೊಟ್ಟೆಗೆ ಪ್ರತಿನಿತ್ಯವೂ ಸ್ವಲ್ಪವಾದರೂ ಅನ್ನ ಬೀಳುತ್ತಿದೆ. ತಮ್ಮ ಹೊಟ್ಟೆಗೆ ಸಿಕ್ಕುತ್ತಿರುವ ಅನ್ನದ ಜೊತೆಗೆ ಆ ರಾಜ್ಯದ ಬಡಜನರಿಗೆಲ್ಲ ದಿನವೊಂದಕ್ಕೆ ಎರಡು ರೂಪಾಯಿನಷ್ಟು ಹಣವೂ ಸಿಕ್ಕುತ್ತಿದೆ. ಈ ರೀತಿಯಾಗಿ ಲಕ್ಷಾಂತರ ಬಡಜನರು ಸರ್ಕಾರದಿಂದ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಸರ್ಕಾರವು ಈ ಸೌಲಭ್ಯಗಳನ್ನು ತನ್ನ ಜನತೆಗೆ 'ಪಂಚಾಯಿತಿ ಆಡಳಿತ'ದ ಮೂಲಕ ತಲುಪಿಸುತ್ತಿದೆ. ರಾಜ್ಯದ ಬಹುಪಾಲು ಪಂಚಾಯಿತಿಗಳೆಲ್ಲಾ ಸಿ.ಪಿ.ಐ. (ಎಂ) ನೇತೃತ್ವದಲ್ಲಿವೆ. ಆದ್ದರಿಂದ ಸಹಜವಾಗಿಯೇ ಗ್ರಾಮೀಣ ಬಡಜನತೆಯು ಸಿ.ಪಿ.ಐ. (ಎಂ) ಪಕ್ಷಕ್ಕೆ ತುಂಬಾ ಋಣಿಗಳಾಗಿದ್ದಾರೆ ಮತ್ತು ಅದನ್ನು ಪ್ರೀತಿಸುತ್ತಾರೆ.

ಕೂಲಿ ಹೆಚ್ಚಳ:

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹೋರಾಟಗಳಿಂದಾಗಿ ರಾಜ್ಯದ ಬೇಸಾಯ ಕೂಲಿಗಾರರ ಕೂಲಿಯಲ್ಲಿ ಗಮನಾರ್ಹವಾದ ಹೆಚ್ಚಳವಾಗಿದೆ. ಇದರಿಂದಾಗಿ ಆ ರಾಜ್ಯದ ಭೂಹೀನ ಬೇಸಾಯ ಕೂಲಿಗಾರರೂ ಸಹ ಸಿ.ಪಿ.ಐ. (ಎಂ)ಗೆ ತಮ್ಮ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ.

ಬಡರೈತರ ರಕ್ಷಣೆ:

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಪ. ಬಂಗಾಳದ ವಾಮರಂಗ ಸರ್ಕಾರದ ಪ್ರಖ್ಯಾತಿಗೆ ಮತ್ತೊಂದು ಪ್ರಮುಖ ಕಾರಣವೆಂದರೆ, "ಪಾಲಿಗಾಗಿ ಜಮೀನು ಮಾಡುತ್ತಿರುವ ಬಡರೈತರ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡು ಬರುತ್ತಿರುವುದಾಗಿದೆ." ಹಿಂದಿನ ಕಾಂಗ್ರೆಸ್ ಆಡಳಿತೆಯಲ್ಲಿ ಕೆಲವೇ ಜಮೀನ್ದಾರರ ಹಿತರಕ್ಷಣೆಯಾಗುತ್ತಿದ್ದರೆ ಈಗಿನ ವಾಮರಂಗ ಸರ್ಕಾರದ ಆಡಳಿತೆಯಲ್ಲಿ ಬಹುಸಂಖ್ಯಾತ ಬಡರೈತರ ಹಿತರಕ್ಷಣೆಯಾಗುತ್ತಿದೆ. ಹಿಂದಿನ ಕಾಂಗ್ರೆಸ್ ಆಡಳಿತೆಯಲ್ಲಿ ಬಡರೈತರನ್ನು ಸುಲಿಗೆಮಾಡುತ್ತ ಜಮೀನ್ದಾರರು ಮಾಡುತ್ತಿದ್ದ ಪುಂಡಾಟವೆಲ್ಲ ಈಗ ನಿಂತುಹೋಗಿವೆ. ಯಾಕೆಂದರೆ ವಾಮರಂಗ ಸರ್ಕಾರವು ಅವರ ಪುಂಡಾಟವನ್ನು ಬಗ್ಗುಬಡಿಯುತ್ತಿದೆ ಮತ್ತು ಬಡರೈತರ ಬೆಂಗಾವಲಾಗಿ ಅದು ನಿಂತಿದೆ. ಕ್ರಮೇಣವಾಗಿ ಬಡರೈತರಿಗೆ ಬ್ಯಾಂಕಿನ ಸಾಲ ಸೌಲಭ್ಯಗಳು ಸಿಕ್ಕುವಂತೆ ಅಲ್ಲಿನ ಸರ್ಕಾರ ಕ್ರಮವಹಿಸಿದೆ. ಆದರೆ ಹಿಂದಿನ ಕಾಂಗ್ರೆಸ್ ಆಳ್ವಿಕೆಯಲ್ಲಿ ಬ್ಯಾಂಕಿನ ಸಾಲಸೌಲಭ್ಯಗಳನ್ನೆಲ್ಲಾ ನುಂಗಿಹಾಕಿದವರು ಜಮೀನ್ದಾರರೇ ಆಗಿದ್ದರು. ಆದರೆ ಈಗ ಇದು ಸಾಧ್ಯವಾಗುತ್ತಿಲ್ಲ. ವಾಮರಂಗ ಸರ್ಕಾರದ ಈ ಜನಪರ ನೀತಿಗಳಿಂದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ವಾಮರಂಗವನ್ನು ನಡೆಸುತ್ತಿದ್ದರು. ಆದರೆ ಈಗ ಅವರ ಆಟ ನಡೆಯುತ್ತಿಲ್ಲ. ಬಡರೈತರು ಮತ್ತು ಬೇಸಾಯ ಕೂಲಿಗಾರರು ಮುಂದೆ ಬಂದು ಪಂಚಾಯತ್ ಆಡಳಿತೆ ಮೂಲಕ ಹೊಸ ಬದುಕನ್ನು ಆರಂಭಿಸಿದ್ದಾರೆ. ಬಲಿಷ್ಟ ಬಂಗಾಳವನ್ನು ಕಟ್ಟಲು ಹೊರಟಿದ್ದಾರೆ. ಹೀಗೆ ಮಾಡಿದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರು. ನೂರಾರು ವರ್ಷಗಳಿಂದ ಧ್ವನಿಯಿಲ್ಲದಿದ್ದ ಬಡಜನತೆಗೆ ಧ್ವನಿ ಕೊಟ್ಟವರು ಮಾರ್ಕ್ಸ್‌ವಾದಿಗಳು. ಸಿ.ಪಿ.ಐ.(ಎಂ)ನ ಗ್ರಾಮೀಣ ನಾಯಕತ್ವ ಇರುವುದು ಗ್ರಾಮಾಂತರದ ಮಧ್ಯಮ ವರ್ಗದ ಹಾಗೂ ಬಡರೈತರ ನಡುವೆ. ಈ ನಾಯಕತ್ವಕ್ಕೆ ಗ್ರಾಮಗಳ ಬೇಸಾಯ ಕೂಲಿಗಾರರು ಬೆಂಬಲ ಕೊಡುತ್ತಿದ್ದಾರೆ. ಆದ್ದರಿಂದ ಪ. ಬಂಗಾಳದ ಗ್ರಾಮಜೀವನದ ಸ್ವರೂಪವೇ ಆಮೂಲಾಗ್ರವಾಗಿ ಬದಲಾಗುತ್ತಿದೆ ಎನ್ನಬಹುದು.

ತಮ್ಮ ಹಿತಾಸಕ್ತಿಗಳಿಗೇ ಕೊಡಲಿ ಪೆಟ್ಟು ಹಾಕುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಮತ್ತು ಪ. ರಂಗ ಸರ್ಕಾರದ ವಿರುದ್ಧ ಸಂಯುಕ್ತ ಕಾರ್ಯಾಚರಣೆಗೆ ಅಣಿಯಾಗುತ್ತಿವೆ. ಆದರೆ ಬಡಜನತೆಯ ಬೆಂಬಲವಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರತಿಗಾಮಿಗಳ ಈ ಕಾರ್ಯಾಚರಣೆಯನ್ನು ಬಗ್ಗುಬಡಿಯುತ್ತಿದೆ.

ಸರ್ಕಾರದ ವೈಫಲ್ಯಗಳು:

ಬಡಜನತೆಯ ಹಿತಕ್ಕಾಗಿ ನಿರಂತರ ದುಡಿಯುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಪ. ಬಂಗಾಳ ವಾಮರಂಗ ಸರ್ಕಾರದ ವೈಫಲ್ಯಗಳು ಇಲ್ಲವೇನೂ ಎಂದಲ್ಲ. ವೈಫಲ್ಯಗಳೂ ಇವೆ. ಒಂದು ಕೊರತೆಯೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರ ಅಭಿವೃದ್ಧಿ ಕೆಲಸಮಾಡುತ್ತಿರುವ ಪಂಚಾಯತ್‌ಗಳಲ್ಲಿ ಪಕ್ಷದ ಕಾರ್ಯಕರ್ತರ ತರಬೇತಿ ಸಾಕಷ್ಟು ಇಲ್ಲದಿರುವುದು. ರಾಜ್ಯಮಟ್ಟದ ನಾಯಕತ್ವವು ಇದರ ಮೇಲೆ ನಿಗಾ ಇಟ್ಟು ಆಡಳಿತ ನಡೆಸುವ ತರಬೇತಿಯನ್ನು ಇವರಿಗೆ ಕೊಡದೆ ಇದ್ದರೆ, ಇವರಿಂದ ಹಾನಿ ಇದೆ. ಈ ಗ್ರಾಮೀಣ ಕಾರ್ಯಕರ್ತರ ಮೇಲೆ ನಿಗಾ ಇಡುವ, ಅವರನ್ನು ತರಬೇತುಗೊಳಿಸುವ ಕಾರ್ಯಕ್ರಮವನ್ನು ಪಕ್ಷವು ಹಾಕಿಕೊಂಡಿದೆ.

ಅತಿ ಅಪೇಕ್ಷಿ ಮ್ಯಧಮವರ್ಗ:

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು

[7ನೇ ಪುಟ ನೋಡಿ]

> ಬೂರ್ಜ್ವ ಪತ್ರಿಕೆಯೊಂದರಲ್ಲಿ ಬಂದ ಈ ವರದಿಯನ್ನು ಅಭ್ಯಾಸ ಮಾಡಿದಮೇಲಾದರೂ ಬಲಕಮ್ಯುನಿಸ್ಟ್ ಪಕ್ಷದ ನಮ್ಮ ಮಿತ್ರರು ಬಾಲಿಶವಾದ, ಬೇಜವಾಬ್ದಾರಿಯ ಮತ್ತು ನಿರಸತ್ತ ಪ್ರಶ್ನೆಗಳನ್ನು ಕೇಳದೆ ಹಾಗೂ ಅಗಾಧ ಶ್ರಮದಿಂದ ಹೊರತರುತ್ತಿರುವ ತಮ್ಮ ಪತ್ರಿಕೆಯ ಪುಟಗಳನ್ನು ವ್ಯರ್ಥ ಮಾಡದೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ಆಸೆಗಣ್ಣುಗಳಿಂದ ನೋಡುತ್ತಿರುವ ಮತ್ತು ಅದನ್ನು ಬೆಂಬಲಿಸುತ್ತಿರುವ ಕೋಟಿ ಕೋಟಿ ಭಾರತದ ಬಡಜನತೆಯನ್ನು ಅವರು ಸೇರಿಕೊಳ್ಳುತ್ತಾರೆಂದು ಆಶಿಸುತ್ತೇವೆ.

ಪ. ಬಂಗಾಳದ ಹಳ್ಳಿಯ ಬಡ ರೈತರು ಹೇಳುತ್ತಾರೆ.......

ಇದು ನಮ್ಮ ಸರ್ಕಾರ ಎಂದು

ಗ್ರಾಮೀಣ ಬಡರೈತರು ಕೊಂಡಾಡುತ್ತಿದ್ದಾರೆ.

ಜಮೀನ್ದಾರರ ಕೆಂಗಣ್ಣು:

ವಾಮ ಸರ್ಕಾರದ ಬಡಜನತೆಯ ಪರವಾದ ಈ ಎಲ್ಲ ಕ್ರಮಗಳಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಸಿರಿವಂತ ರೈತರು ಮತ್ತು ಜಮೀನ್ದಾರರು ವಾಮರಂಗ ಸರ್ಕಾರದ ಮೇಲೆ ಸಹಜವಾಗಿಯೇ ಕಿಡಿಕಾರುತ್ತಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಬೇಸಾಯ ಕೂಲಿಗಾರರ ಕೂಲಿ ಹೆಚ್ಚಳಕ್ಕಾಗಿ ಹೋರಾಟ ಮಾಡಿದ್ದಕ್ಕೂ ಮತ್ತು ವಾಮರಂಗ ಸರ್ಕಾರವು ಕೂಲಿಗಾರರ ಕನಿಷ್ಟ ವೇತನವನ್ನು ಹೆಚ್ಚಿಸಿ ಶಾಸನ ಮಾಡಿದ್ದಕ್ಕೂ ಜಮೀನ್ದಾರಿ ವರ್ಗ ತುಂಬಾ ಕೋಪಗೊಂಡಿದೆ. ಇವೆಲ್ಲದರ ಮೇಲೆ, ಕಾಲಕಾಲದಿಂದಲೂ ಸಂಪ್ರದಾಯಬದ್ಧವಾಗಿ ಬಂದಿದ್ದ ಸಮಾಜದಲ್ಲಿನ ತಮ್ಮ ನಾಯಕತ್ವಕ್ಕೂ ಕಲ್ಲಾಕುವಂತಹ ಸ್ಥಿತಿಗೆ ಬಡರೈತರು ಮತ್ತು ಬೇಸಾಯ ಕೂಲಿಗಾರರು ಬರುತ್ತಿರುವುದು ಜಮೀನ್ದಾರ ಮತ್ತು ಶ್ರೀಮಂತ ರೈತವರ್ಗಕ್ಕೆ ಬರಸಿಡಿಲಾಗಿದೆ.

ಕಳೆದ 30 ವರ್ಷಗಳ ಕಾಂಗ್ರೆಸ್ ಆಳ್ವಿಕೆಯಲ್ಲಿ ಜಮೀನ್ದಾರರು ಮತ್ತು ಶ್ರೀಮಂತ ರೈತರು ಗ್ರಾಮೀಣ ಜೀವನವನ್ನು ತಮಗಿಷ್ಟ ಬಂದಂತೆ ಮತ್ತು ತಮ್ಮ ಹಿತಾಸಕ್ತಿಗಳಿಗನುಸಾರವಾಗಿ ಬಂಗಾಳದ ವಾಮರಂಗ ಸರ್ಕಾರವನ್ನು ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ನಿರ್ನಾಮ ಮಾಡಬೇಕೆಂದು ಅಲ್ಲಿನ ಜಮೀನ್ದಾರ ಹಾಗೂ ಶ್ರೀಮಂತ ರೈತವರ್ಗಗಳು ಸತತ ಪ್ರಯತ್ನ ಮಾಡುತ್ತಿವೆ. ಇವರೆಲ್ಲಾ ಕಾಂಗ್ರೆಸ್ (ಐ), ಕಾಂಗ್ರೆಸ್ ಮತ್ತು ಜನತಾಪಕ್ಷಗಳೊಡನೆ ಸೇರಿ ವಾಮ ನಗರಗಳ ಮಧ್ಯಮ ವರ್ಗದ ಬೆಂಬಲವನ್ನು ಸ್ವಲ್ಪಮಟ್ಟಿಗೆ ಕಳೆದುಕೊಳ್ಳುತ್ತಾ ಬಂದಿದೆ. ಇದಕ್ಕೆ ಕಾರಣವೂ ಇದೆ. ಸಿ.ಪಿ.ಐ. (ಎಂ) ನೇತೃತ್ವದ ವಾಮರಂಗ ಸರ್ಕಾರವು ಅಧಿಕಾರಕ್ಕೆ ಬಂದಾಗ ಸರ್ಕಾರದಿಂದ ಅತಿ ಹೆಚ್ಚಾಗಿ ಅಪೇಕ್ಷೆ ಮಾಡಿದ ವರ್ಗವೆಂದರೆ ನಗರಗಳಲ್ಲಿನ ಮಧ್ಯಮ ವರ್ಗ. ಆದರೆ ವಿದ್ಯುತ್

> ರಾಷ್ಟ್ರದ ದುಡಿಯುವ ಜನತೆ, ರೈತಾಪಿವರ್ಗ, ಮಧ್ಯಮವರ್ಗದ ಜನತೆ, ಬುದ್ಧಿಜೀವಿಗಳು ಮತ್ತು ಯುವಜನ-ವಿದ್ಯಾರ್ಥಿಗಳು ಪಶ್ಚಿಮ ಬಂಗಾಲ ಹಾಗೂ ತ್ರಿಪುರ ರಾಜ್ಯಗಳ ವಾಮರಂಗ ಸರ್ಕಾರಗಳ ಸಾಧನೆಗಳನ್ನು ಅತ್ಯಂತ ಕುತೂಹಲದಿಂದ ನೋಡುತ್ತಿದ್ದಾರೆ. ಆ ಸರ್ಕಾರಗಳ ಸಾಧನೆಯ ಬಗ್ಗೆ ಬೂರ್ಜ್ವ ಹಾಗೂ ಎಡಪಕ್ಷಗಳ ಪತ್ರಿಕೆಗಳೂ ಬರೆಯುತ್ತಿವೆ. ಕಳೆದ ತಿಂಗಳ 20ರಂದು ತನ್ನ ಎರಡು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿದ ಪ. ಬಂಗಾಳ ವಾಮರಂಗ ಸರ್ಕಾರದ ಸಾಧನೆಯನ್ನು ಕುರಿತು ಬಲ ಕಮ್ಯುನಿಸ್ಟ್ ಪಕ್ಷದ ಮುಖಪತ್ರಿಕೆ 'ಕೆಂಬಾವುಟ'ದಲ್ಲಿ ದಿಲೀಪ್‌ಘೋಷ್ ಚೌದರಿ ಎಂಬುವರು ಒಂದು ಲೇಖನವನ್ನು ಬರೆದು ಅದರಲ್ಲಿ "ಪ. ಬಂಗಾಳದಲ್ಲಿ ಮಾರ್ಕ್ಸಿಸ್ಟ್ ಪಕ್ಷದ ಮುಂದಾಳುತನದಲ್ಲಿ ವಾಮರಂಗ ಸರ್ಕಾರವು ಅಧಿಕಾರಕ್ಕೆ ಬಂದು ಕಳೆದ 20ಕ್ಕೆ 2 ವರ್ಷಗಳಾದವು. ಈ 2 ವರ್ಷಗಳಲ್ಲಿ ಕಾರ್ಮಿಕರಿಗಾಗಿ, ರೈತರಿಗಾಗಿ, ಜನಸಾಮಾನ್ಯರಿಗಾಗಿ ಯಾವ ಸುಧಾರಣಾ ಕ್ರಮಗಳನ್ನು ಅದು ಕೈಗೊಂಡಿದೆ ? ರಾಜ್ಯದ ಅಭಿವೃದ್ಧಿಗಾಗಿ ಅದು ಇಟ್ಟ ಹೆಜ್ಜೆಗಳಾವುವು ? ಎಂಬುದನ್ನು ನೋಡುವಾಗ ವಾಮರಂಗ ಸರ್ಕಾರದ ದಾಖಲೆಗಳು ಏನೇನೂ ಸಾಲವು ಎಂದು ಸುಲಭದಲ್ಲಿ ಹೇಳಬಹುದು. ನೌಕರಶಾಹಿ ಅಧಿಕಾರಿಗಳೂ, ಕುಪ್ರಸಿದ್ಧರಾದ ಪೋಲೀಸರೂ ಅಲ್ಲಿಂದು ಸರ್ವಶಕ್ತರಾಗಿದ್ದಾರೆ" ಎಂದು ಹೇಳುತ್ತಾರೆ.

ಕ್ರಾಂತಿಯ ಮೊದಲ ಹೆಜ್ಜೆಗಳಲ್ಲಿ ಆಫ್ಘಾನಿಸ್ಥಾನ

ಆಫ್ಘಾನಿಸ್ತಾನದಲ್ಲಿ ಜನತೆಯ ಪ್ರಜಾಪ್ರಭುತ್ವವಾದಿ ಕ್ರಾಂತಿ ನಡೆದು ಕೇವಲ ಒಂದು ವರ್ಷವಾಗಿದೆ. ಆದರೆ ಹೊಸದಾಗಿ ಹುಟ್ಟಿದ ಗಣರಾಜ್ಯ ತನ್ನ ಕಾಲಮೇಲೆ ತಾನು ನಿಂತು ಮುನ್ನಡೆಯುತ್ತಿರುವುದು ಈಗಾಗಲೇ ತಿಳಿದ ವಿಚಾರವಾಗಿದೆ.

1978ರ ಏಪ್ರಿಲ್ 17ರ ನಂತರ ತುಂಬ ಪ್ರಗತಿ ಸಾಧಿಸಲಾಗಿದೆ. ಮಿಲಿಯಗಟ್ಟಲೆ ದುಡಿಯುವಜನತೆಯನ್ನು ಕ್ರಾಂತಿಯು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ದಾರಿಯಲ್ಲಿ ನಡೆಸಿದೆ. ಅಧಿಕಾರವನ್ನು ಕೈಗೆ ತೆಗೆದುಕೊಂಡ ಜನತಾ ಪ್ರಜಾಪ್ರಭುತ್ವವಾದಿ ಪಕ್ಷವು, ದಬ್ಬಾಳಿಕೆ ಮತ್ತು ಶೋಷಣೆಯಿಲ್ಲದ ಸ್ವತಂತ್ರ ಸಮಾಜದ ನಿರ್ಮಾಣದ ಬಗ್ಗೆ ಜನಸಮೂಹ ಕಾಣುತ್ತಿದ್ದ ಕನಸನ್ನು ನನಸಾಗಿಸಲು ಶ್ರಮಿಸುತ್ತಿದೆ.

ಹಿಂದಿನ ಆಡಳಿತಗಳಿಂದ ತೀರ ಪ್ರಾಚೀನ ಆರ್ಥಿಕಸ್ಥಿತಿಯುಳ್ಳ, ವ್ಯವಸಾಯದಲ್ಲಿ ಊಳಿಗಮಾನ್ಯ ಸಂಬಂಧಗಳನ್ನು ಹೊಂದಿದ್ದ ಮತ್ತು ಹದಿನೈದು ಮಿಲಿಯ ಜನಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಸಂಪೂರ್ಣ ಅನಕ್ಷರತೆ ಇದ್ದ ದೇಶವೊಂದರಲ್ಲಿ, ವಿಶ್ವದ ಅತಿ ಹಿಂದುಳಿದ ದೇಶ ಎಂದು ವಿಶ್ವಸಂಸ್ಥೆ ತಜ್ಞರು ಭಾವಿಸಿದ್ದ ದೇಶದಲ್ಲಿ ಏಪ್ರಿಲ್ ಕ್ರಾಂತಿ ಜಯ ಪಡೆಯಿತೆಂಬುದನ್ನು ಗಮನಿಸಬೇಕು. ಇಲ್ಲಿ ಹಿಂದುಳಿದಿರುವಿಕೆಯ ವಿರುದ್ಧ ಸಮರ ಸಾರುತ್ತಾ ಕ್ರಾಂತಿ ಆರಂಭವಾಯಿತು.

ದುಡಿಯುವ ಜನತೆಯೇ ಮುಖ್ಯ :

ದುಡಿಯುವ ಜನತೆಯ ವಿಶಾಲ ಸಮೂಹದ ಹಿತಾಸಕ್ತಿಗಳೇ ತನ್ನ ಪ್ರಮುಖ ಗಮನ ಎಂಬುದನ್ನು ಜನತಾ ಪ್ರಜಾಪ್ರಭುತ್ವವಾದಿ ಪಕ್ಷ ಮತ್ತು ಕ್ರಾಂತಿಕಾರಿ ಸರ್ಕಾರಗಳ ಮೊದಲ ಹೆಜ್ಜೆಗಳೇ ತೋರಿಸಿದವು. ಕ್ರಾಂತಿಕಾರಿ ಸಮಿತಿಯ ಅಧ್ಯಕ್ಷ ಮತ್ತು ಪಕ್ಷದ ಕಾರ್ಯದರ್ಶಿ ನೂರ್‌ಮಹಮದ್ ತರಕಿ ಅವರು 1978ರ ಮೇ 9 ರಂದು ಪ್ರಚುರಪಡಿಸಿದ ಸರ್ಕಾರಿ ಕಾರ್ಯಕ್ರಮ ಈ ವಿಶಾಲ ಜನಸಮೂಹವನ್ನು ಉದ್ದೇಶಿಸಿದ್ದೇ ಆಗಿದೆ.

ಈ ಕಾರ್ಯಕ್ರಮವು ತೀವ್ರತರ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ತರುತ್ತದೆ. ಭೂಸುಧಾರಣೆ, ಸಾರ್ವಜನಿಕ ಜೀವನದಲ್ಲಿ ಪ್ರಜಾಪ್ರಭುತ್ವ ತರುವುದು,ರಾಷ್ಟ್ರೀಯ ದಬ್ಬಾಳಿಕೆ ಮತ್ತು ವಿಭಾಗೀಕರಣದ ನಾಶ, ಸರ್ಕಾರಿ ವಲಯದ ಬೆಳವಣಿಗೆಯ ಮೂಲಕ ಕೈಗಾರಿಕಾ ಪ್ರಗತಿ, ಜನತೆಯ ಜೀವನ ಮಟ್ಟದ ಸುಧಾರಣೆ, ನಿರುದ್ಯೋಗದ ನಿವಾರಣೆ ಮತ್ತು ಬೆಲೆ ಹತೋಟಿ, ಇವು ಕಾರ್ಯಕ್ರಮದ ಉದ್ದೇಶಗಳು.

ಅಲಿಪ್ತನೀತಿ, ನಿಶ್ಶಸ್ತ್ರೀಕರಣಕ್ಕೆ ಹೋರಾಟ, ರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ಬೆಂಬಲ, ಆಫ್ಘಾನಿಸ್ತಾನದ ನೆರೆಹೊರೆಯವರೊಂದಿಗೆ ಸ್ನೇಹ ಸಂಬಂಧಗಳನ್ನು ಬಲಪಡಿಸುವುದು, ಶಾಂತಿ ಬಯಸುವ ಎಲ್ಲ ದೇಶಗಳೊಂದಿಗೆ ಸ್ನೇಹ ಬೆಳೆಸುವುದು, ಇವುಗಳನ್ನೊಳಗೊಂಡ ನೀತಿಗೆ ತಾನು ಬದ್ಧವೆಂದು ಸರ್ಕಾರ ಘೋಷಿಸಿದೆ.

ದುಡಿಯುವ ಜನತೆ, ದೇಶದ ಎಲ್ಲ ದೇಶಭಕ್ತ ಶಕ್ತಿಗಳು ಈ ಕಾರ್ಯಕ್ರಮವನ್ನು ಉತ್ಸಾಹದಿಂದ ಸ್ವಾಗತಿಸಿ, ಇದು ನನಸಾಗಲು ಕಾರ್ಯಪ್ರವೃತ್ತವಾದವು. ಆಫ್ಘಾನಿಸ್ತಾನದ ಚರಿತ್ರೆಯಲ್ಲೇ ಮೊದಲಬಾರಿಗೆ ಟ್ರೇಡ್‌ಯೂನಿಯನ್‌ಗಳು, ಪ್ರಗತಿಶೀಲ ಯುವಕರ ಮತ್ತು ಮಹಿಳೆಯರ ಸಂಘಗಳು, ಮತ್ತಿತರ ಸಾಮೂಹಿಕ ಸಂಘಟನೆಗಳು ಸ್ಥಾಪಿತವಾದುವು.

ಹಳೆಯ ಸರ್ಕಾರಿ ಯಂತ್ರದ ಬದಲಾವಣೆ :

ರಾಜಧಾನಿ ಮತ್ತು ಪ್ರಾಂತಗಳಲ್ಲಿ ಹಳೇ ಸರ್ಕಾರದ ಆಡಳಿತ ಯಂತ್ರವನ್ನು ಉರುಳಿಸಿ,, ನ್ಯಾಯವ್ಯವಸ್ಥೆಯನ್ನು ಸರಿಪಡಿಸಿ, ಕ್ರಾಂತಿಗೆ ಬದ್ಧವಾದ ತಜ್ಞರನ್ನು ಆಡಳಿತಕ್ಕೆ ತರಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಜನತೆಯ ಸಶಸ್ತ್ರ ಪಡೆಗಳನ್ನು ಬಲಪಡಿಸಲಾಗುತ್ತಿದೆ.

ಕೆಲವು ಆಹಾರಗಳು ಮತ್ತು ತಯಾರಾದ ವಸ್ತುಗಳ ಬೆಲೆಯನ್ನು ಇಳಿಸಲಾಗಿದೆ. ನಿರುದ್ಯೋಗವನ್ನು ಕಡಿಮೆ ಮಾಡಲು ಸಾವಿರಾರು ಹೊಸ ಕೆಲಸಗಳನ್ನು ಸೃಷ್ಟಿಸಲಾಗಿದೆ. ದುಡಿಯುವ ಜನತೆಗೆ ಮನೆಗಳನ್ನು ಕಟ್ಟಲಾಗುತ್ತಿದ್ದು, ಉಚಿತ ವೈದ್ಯಕೀಯ ಸೇವೆಯನ್ನುಜಾರಿಗೆ ತರಲಾಗುತ್ತಿದೆ.

ರಾಷ್ಟ್ರೀಯ ಅಲ್ಪಸಂಖ್ಯಾತರ ಭಾಷೆಗಳಲ್ಲೂ ಶಿಕ್ಷಣ ನೀಡುವ ಐವತ್ತು ಹೊಸ ಶಾಲೆಗಳನ್ನು ತೆರೆಯಲಾಗಿದೆ. ವಾರ್ತಾಪತ್ರಿಕೆಗಳನ್ನು ಆರಂಭಿಸಲಾಗಿದ್ದು, ಅಲ್ಪಸಂಖ್ಯಾತರ ಭಾಷೆಗಳಲ್ಲೂ ರೇಡಿಯೋ ಪ್ರಸಾರ ನಡೆಸಲಾಗುತ್ತಿದೆ. ವಿಶೇಷವಾಗಿ ಆರಂಭಿಸಲ್ಪಟ್ಟ ಶಿಕ್ಷಣ ಕಾರ್ಯಕ್ರಮಗಳಲ್ಲಿ ಒಂದು ಮಿಲಿಯ ಜನರು ಓದಲು ಬರೆಯಲು ಕಲಿಯಲಾರಂಭಿಸಿದ್ದಾರೆ. ತಾಂತ್ರಿಕ ಸಿಬ್ಬಂದಿಯ ತರಬೇತಿಯನ್ನು ವಿಸ್ತರಿಸಲಾಗಿದ್ದು, ವಿಜ್ಞಾನಗಳ ಅಕಾಡೆಮಿಯೊಂದು ಸ್ಥಾಪನೆಗೊಂಡಿದೆ.

ಹೊಸ ಜೀವನದ ನಿರ್ಮಾಣದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಅವಕಾಶವಾಗುವಂತೆ ಆಫ್ಘನ್ ಮಹಿಳೆಯರಿಗೆ ಸರ್ಕಾರವು ಸಮಾನ ಹಕ್ಕುಗಳನ್ನು ಕೊಟ್ಟಿದೆ.

ಅತಿಮುಖ್ಯ ಕ್ರಮ :

ಅತ್ಯಂತ ಮುಖ್ಯವಾದ ಮತ್ತು ಆಫ್ಘಾನಿಸ್ತಾನದ ಸ್ಥಿತಿಗತಿಗಳಲ್ಲಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ತುಂಬ ಮಹತ್ವವಾದ ಕ್ರಮ ಎಂದರೆ ಭೂಸುಧಾರಣೆ. ಏಕೆಂದರೆ ದೇಶದ ಆರ್ಥಿಕತೆಯಲ್ಲಿ ವ್ಯವಸಾಯ ಮುಖ್ಯ ಭಾಗವಾಗಿದ್ದು, ದೇಶದ ಒಟ್ಟು ಉತ್ಪಾದನೆಯ ಅರ್ಧಕ್ಕಿಂತಲೂ ಹೆಚ್ಚುಭಾಗ ಕೃಷಿಗೆ ಸೇರಿದೆ. ಅಲ್ಲದೆ ಜನಸಂಖ್ಯೆಯ ಐದನೆ ನಾಲ್ಕು ಭಾಗ, ಕೃಷಿಯಲ್ಲಿ ಉದ್ಯೋಗ ಪಡೆದಿದ್ದಾರೆ.

ಇತ್ತೀಚಿನವರೆಗೂ, ಭೂಹೀನ ರೈತರು ಮತ್ತು ಅತಿ ಸಣ್ಣ ಜಮೀನುಗಳಿಂದ ಜೀವನ ನಡೆಸಲು ಒದ್ದಾಡುತ್ತಿದ್ದ ರೈತರೇ ಗ್ರಾಮೀಣ ಜನಸಂಖ್ಯೆಯ ಅರ್ಧದಷ್ಟಿದ್ದರು. ಅರ್ಧಕ್ಕಿಂತಲೂ ಹೆಚ್ಚು ಕೃಷಿಭೂಮಿಯನ್ನು ಗ್ರಾಮೀಣ ಜನಸಂಖ್ಯೆಯಲ್ಲಿ ಕೇವಲ ಶೇಕಡಾ ಐದರಷ್ಟಿದ್ದ ದೊಡ್ಡ ಭೂಮಾಲೀಕರೇ ಪಡೆದಿದ್ದರು. ಅವರಲ್ಲಿ ಅನೇಕರ ಹಿಡುವಳಿಗಳು ನೂರಾರು, ಸಾವಿರಾರು ಹೆಕ್ಟೇರುಗಳಷ್ಟಿದ್ದವು.

1973ರಲ್ಲಿ ರಾಜಶಾಹಿಯನ್ನು ಅಂತ್ಯಗೊಳಿಸಿ ಅಧಿಕಾರಕ್ಕೆ ಬಂದ ಮಹಮದ್ ದಾವೂದ್ ಸರ್ಕಾರವು 1975ರಲ್ಲಿ ಒಂದು ಭೂಸುಧಾರಣಾ ಕಾಯಿದೆಯನ್ನು ಜಾರಿಮಾಡಿತ್ತು. ಆದರೆ ಕಾಯಿದೆಯ ಒಂದು ಅಂಶವೂ ಪಾಲನೆಯಾಗಲಿಲ್ಲ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಸರ್ಕಾರದ ದೃಢತೆ ಮತ್ತು ಅದರ ಕ್ರಮಗಳ ಕ್ರಾಂತಿಕಾರಿ ಆಧಾರಗಳು ಸಮಾಧಾನ ನೀಡುವಂತಹವಾಗಿವೆ. ಅತ್ಯಧಿಕ ಪ್ರಮಾಣದ ಭೂಪರಿವರ್ತನೆಗಳು ಕಳೆದ ಒಂದು ವರ್ಷದಲ್ಲಿ ನಡೆದಿವೆ.

ಕಳೆದ ಬೇಸಿಗೆಯಲ್ಲಿ ಕ್ರಾಂತಿಕಾರಿ ಸಮಿತಿಯು ನೀಡಿದ ಆರನೇ ಡಿಕ್ರಿಯು, ಲೇವಾದೇವಿಗಾರರು ಮತ್ತು ಭೂಮಾಲೀಕರಿಗೆ ರೈತರು ಕೊಡಬೇಕಾಗಿದ್ದ ಸಾಲವನ್ನು ಕಡಿಮೆಮಾಡಿತು. ಆಧಾರವಾಗಿಟ್ಟಿದ್ದ ಜಮೀನನ್ನು ಅವರಿಗೆ ಮತ್ತೆ ವಾಪಸ್ಸುಕೊಡಿಸಿತು. ಸ್ವಾಮಿತ್ವ ಕಳೆದುಕೊಂಡಿದ್ದ ಹಿಡುವಳಿಗಳನ್ನೂ ಅವರಿಗೆ ಮತ್ತೆ ಕೊಡಿಸಿತು. ಶೇ. ಎಪ್ಪತ್ತೈದಕ್ಕಿಂತಲೂ ಹೆಚ್ಚು ರೈತರು ಸಾಲದ ಹೊರೆ ನೀಗಿಕೊಂಡರು.

ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿಗಳನ್ನು ಸ್ಥಾಪಿಸುವ ವಿಚಾರದ ಬಗ್ಗೆ ತುಂಬ ಗಮನಹರಿಸಲಾಗಿದೆ. ರೈತರ ಪರಸ್ಪರ ಸಹಾಯ ನಿಧಿಗಳ ರಚನೆಗೆ ವಿಶೇಷ ಕಾನೂನು ತರಲಾಗಿದ್ದು, ಹೆಚ್ಚು ಜಮೀನಿಲ್ಲದ ರೈತರು ಮಾರಾಟ ಮತ್ತು ಮಾರುಕಟ್ಟೆ ಮತ್ತು ಸಾಲದ ಸಹಕಾರಿಗಳನ್ನು ಸೇರುವಂತೆ ಉತ್ತೇಜಿಸಲಾಗುತ್ತಿದೆ. ಇವೆಲ್ಲವೂ ರೈತರನ್ನು ಒಟ್ಟುಗೂಡಿಸಲು ಸಹಾಯಮಾಡಿ, ಭೂಸುಧಾರಣೆಯನ್ನು ಜಾರಿಗೆ ತರಲು ದಾರಿಮಾಡಿವೆ.

ಉಳುವವನಿಗೆ ಭೂಮಿ :

ಕಳೆದ ವರ್ಷದ ನವೆಂಬರ್ ಮುಪ್ಪತ್ತರಂದು ಪ್ರಕಟಿಸಿದ ಭೂಸುಧಾರಣಾ ಡಿಕ್ರಿಯು, ಜಮೀನಿನ ಗುಣಮಟ್ಟವನ್ನು ಅವಲಂಬಿಸಿ ಆರರಿಂದ ಅರವತ್ತು ಹೆಕ್ಟೇರುಗಳ ಮಿತಿಯನ್ನು ವಿಧಿಸುತ್ತದೆ. ರಾಜಮನೆತನಕ್ಕೆ ಸೇರಿದ ಎಲ್ಲ ಹೆಚ್ಚುವರಿ ಜಮೀನು ಮತ್ತು ಹಿಂದೆ ದೇಶಕ್ಕೆ ಸೇರಿದ್ದು ನಂತರ ನ್ಯಾಯಬಾಹಿರವಾಗಿ ಖಾಸಗಿ ಮಾಲೀಕರು ಅತಿಕ್ರಮಿಸಿಕೊಂಡ ಜಮೀನುಗಳನ್ನು ಈಗ ದೇಶವು ಯಾವ ಪರಿಹಾರವನ್ನೂ ನೀಡದೆ ವಶಪಡಿಸಿಕೊಳ್ಳುತ್ತದೆ. ಹೀಗೆ ಪಡೆದುಕೊಂಡ ಭೂಮಿಯಲ್ಲಿ ಸರ್ಕಾರದ ಫಾರಂಗಳು ಅಥವಾ ಕೃಷಿ ಸಹಕಾರಿಗಳನ್ನು ಸ್ಥಾಪಿಸಲಾಗುತ್ತದೆ. ಉಳಿದ ಭೂಮಿಯನ್ನು 1-1.2 ಇಂದ 10 ಹೆಕ್ಟೇರುಗಳ ಪ್ರಮಾಣದಲ್ಲಿ ಭೂಹೀನರು, ಭೂಮಿ ಬಯಸುವ ರೈತರು ಮತ್ತು ಬಡ ಕಾಡುಜನದನಗಾಹಿಗಳಿಗೆ ಹಂಚಲಾಗುತ್ತದೆ. ನೀರಿನ ಸಮಾನ ಮತ್ತು ಸರಿಯಾದ ಹಂಚಿಕೆಗೂ ಅವಕಾಶ ಮಾಡಿಕೊಡಲಾಗಿದೆ.

ಪ್ರಜಾಪ್ರಭುತ್ವವಾದಿ ಆಫ್ಘನ್ ಗಣರಾಜ್ಯದ ಹದಿನೆಂಟು ವರ್ಷ ತುಂಬಿದ ಯಾವೊಬ್ಬ ಪ್ರಜೆಯೂ ಜಮೀನು ಪಡೆದು ತಾನೇ ಅಥವಾ ತನ್ನ ಕುಟುಂಬದ ಸಹಾಯದಿಂದ ಉಳಲು ಅವಕಾಶವಿದೆ. ಗ್ರಾಮೀಣ ಶೋಷಕರಿಂದ ಈ ಹೊಸ ನೆಲೆಗಾರರನ್ನು ರಕ್ಷಿಸಲು, ಈ ಜಮೀನನ್ನು ಸಾಲಕ್ಕೆ ಆಧಾರವಾಗಿಡಲು ಅಥವಾ ಭೋಗ್ಯಕ್ಕೆ ಹಾಕಲು, ಮಾರಲು ಅಥವಾ ಉತ್ತರಾಧಿಕಾರಿಗಳಲ್ಲಿ ಹಂಚಲು ಅವಕಾಶ ಕೊಟ್ಟಿಲ್ಲ. ಸುಧಾರಣೆಯ ಅಂಗವಾಗಿ ಜಮೀನು ಪಡೆದ ಎಲ್ಲ ರೈತರಿಗೂ, ದೇಶದ ಸಾಲ ಮತ್ತು ಕೃಷಿಸಂಸ್ಥೆಗಳು, ಸಾಲ, ಕೃಷಿಉಪಕರಣ, ಬೀಜಗಳು ಮತ್ತು ರಸಗೊಬ್ಬರಗಳನ್ನು ಸುಲಭ ಕ್ರಯದಲ್ಲಿ ಕೊಡುತ್ತವೆ.

ಭೂಸುಧಾರಣೆ ಜಾರಿಯ ಮೇಲ್ವಿಚಾರಣೆ ನಡೆಸಲು ರೈತರನ್ನುಳ್ಳ ವಿಶೇಷ ಸಮಿತಿಗಳನ್ನು ರಚಿಸಲಾಗಿದೆ.

ಮೊದಲು ದಕ್ಷಿಣದಲ್ಲಿ ಆರಂಭವಾದ ಈ ಸುಧಾರಣೆಯು ಈಗ ದೇಶದ ಎಲ್ಲ ಭಾಗಗಳಿಗೂ ಹಬ್ಬಿದೆ. ಒಂದು ಲಕ್ಷಕ್ಕೂ ಹೆಚ್ಚು ರೈತ ಕುಟುಂಬಗಳು ಈ ಹಂಚಿಕೆಯನ್ನು ಪಡೆದಿವೆ.

ಹೀಗೆ ಆಫ್ಘಾನಿಸ್ತಾನದ ಚರಿತ್ರೆಯಲ್ಲೇ ಮೊದಲಬಾರಿಗೆ, ನಿಜವಾದ ತೀವ್ರಗಾಮಿ ಮತ್ತು ಪ್ರಜಾಪ್ರಭುತ್ವವಾದಿ ಪರಿಹಾರವು ಭೂಪ್ರಶ್ನೆಗೆ ದೊರೆತಿದೆ. ಪರಾವಲಂಬಿ ಭೂಮಾಲೀಕವರ್ಗ ನಾಶಗೊಂಡಿದೆ ಮತ್ತು ಉಳುವವರಿಗೆ ಭೂಮಿಯನ್ನು ವರ್ಗಾಯಿಸುವ ಕೆಲಸ ನಡೆದಿದೆ.

ಇಂಥ ತೀವ್ರಗಾಮಿ ನಡೆಯಿಂದ ಸಹಜವಾಗಿ ಪ್ರತಿಗಾಮಿ ಊಳಿಗಮಾನ್ಯ ಭೂಮಾಲೀಕ ಅಂಶಗಳ ಮತ್ತು ಚರ್ಚಿನ ಕೋಪ ಕೆರಳಿದೆ. ಊಳಿಗಮಾನ್ಯ ಭೂಮಾಲೀಕರ ಅಧಿಕಾರವನ್ನು ಪುನಃ ಸ್ಥಾಪಿಸಲು ಇತ್ತೀಚೆಗೆ ಹೀರತ್‌ನಲ್ಲಿ ನಡೆದ ಪ್ರತಿಕ್ರಾಂತಿಕಾರಿ ದಂಗೆಯ ನಾಯಕರು ಮತ್ತು ಅದರ ಚಟುವಟಿಕೆ ನಡೆಸಿದವರು ಇವರೇ. ಆದರೆ ಹಳೆಯದನ್ನು ಸ್ಥಾಪಿಸುವ ಪ್ರಯತ್ನ ವಿಫಲವಾಯಿತು. ಇಂದು, ಗಣರಾಜ್ಯದ ಮಿಕ್ಕ ಕಡೆಗಳಲ್ಲಿ ನಡೆಯುತ್ತಿರುವ ಹಾಗೆ ಹೀರತ್‌ನಲ್ಲೂ ಭೂವಿತರಣೆ ಮುಂದುವರೆಯುತ್ತಿದೆ.

ಮುಂದಿನ ಐದುವರ್ಷಗಳ (1979-84) ದೇಶದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ಮೂಲಭೂತ ಮಾರ್ಗದರ್ಶಕ ಸೂತ್ರಗಳ ಕರಡು ರಚನೆಯನ್ನು ಜನತಾ ಪ್ರಜಾಪ್ರಭುತ್ವವಾದಿ ಪಕ್ಷದ ಕೇಂದ್ರ ಸಮಿತಿ ಮತ್ತು ಸರ್ಕಾರಗಳು ರೂಪಿಸುತ್ತಿವೆ. ಆರ್ಥಿಕತೆಯ ವಸ್ತುಮೂಲ ಮತ್ತು ತಾಂತ್ರಿಕ ತಳಹದಿಯ ತೀವ್ರತರ ಪುನರ್ರಚನೆ ಮತ್ತು ತೀವ್ರ ಬೆಳವಣಿಗೆಯನ್ನು ಮತ್ತು ಇನ್ನೂ ಹೆಚ್ಚಿನ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ಅವು ಉದ್ದೇಶಿಸಿವೆ.

ಹೀರತ್‌ನಿಂದ ಪಾಠಕಲಿಯದ ಆಂತರಿಕ ಮತ್ತು ಬಾಹ್ಯ ಪ್ರತಿಗಾಮಿಗಳು, ಹೊಸ ವ್ಯವಸ್ಥೆಯ ದೃಢೀಕರಣವನ್ನು ಮತ್ತು ಕ್ರಾಂತಿಯ ಮುಂದುವರಿಕೆಯನ್ನು ತಡೆಯಲು ಕೈಲಾಗುವಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಪ್ರತಿಕ್ರಾಂತಿಕಾರಿಗಳ ಪ್ರತಿಯೊಂದು ಉತ್ತೇಜಕ ಕೆಲಸಗಳನ್ನು, ಪ್ರಗತಿಗಾಮಿ, ದೇಶಭಕ್ತ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಉಗ್ರವಾಗಿ ಹಿಮ್ಮೆಟ್ಟಿಸುತ್ತಿವೆ. ಕ್ರಾಂತಿಯ ರಕ್ಷಣೆಯ ಸಮಿತಿಗಳು ದೇಶದಾದ್ಯಂತ ಸ್ಥಾಪನೆಯಾಗಿವೆ.

ವಿದೇಶೀನೀತಿಯ ವಿಚಾರದಲ್ಲೂ ಅಲ್ಲಿನ ಜನತಾ ಸರ್ಕಾರವು ಕಳೆದವರ್ಷದಲ್ಲಿ

[7ನೇ ಪುಟ ನೋಡಿ]

ಆಫ್ಘಾನಿಸ್ತಾನದೊಳಗೆ ನೇರವಾಗಿ ಪ್ರವೇಶಿಸುತ್ತಿರುವ ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರ ಮತ್ತು ಇರಾನಿನ ಇಸ್ಲಾಂ ಆಡಳಿತಗಾರರು, ಆ ದೇಶದ ಪದಚ್ಯುತ ಭೂಮಾಲೀಕವರ್ಗ ಮತ್ತು ಧಾರ್ಮಿಕ ಮತಾಂಧರಿಗೆ ಸಶಸ್ತ್ರ ಬೆಂಬಲಕೊಟ್ಟು ಪ್ರತಿಗಾಮಿ ಅಂಶಗಳನ್ನು ಘೋಷಿಸುತ್ತಿದ್ದಾರೆ. ಆಫ್ಘಾನಿಸ್ತಾನದ ತೀವ್ರಗಾಮಿ ಭೂಸುಧಾರಣೆ ಮುಂತಾದ ಕ್ರಮಗಳು ನೆರೆಹೊರೆಯ ದೇಶಗಳ ಸರ್ವಾಧಿಕಾರಿ ಶಕ್ತಿಗಳು, ಪ್ರತಿಗಾಮಿ ಶಕ್ತಿಗಳು ಮತ್ತು ಧಾರ್ಮಿಕ ಶ್ರೀಮಂತರಿಗೆ ದಿಗಿಲು ಹುಟ್ಟಿಸಿವೆ. ಆಫ್ಘನ್ ಕ್ರಾಂತಿ, ತಮ್ಮ ದೇಶಗಳ ದುಡಿಯುವ ಜನತೆಯ ಮೇಲೂ ಪ್ರಭಾವ ಬೀರಬಹುದೆಂದು ಅವರಿಗೆ ಚಿಂತೆಯಾಗಿದೆ. ಮಾಸ್ಕೋದ "ನ್ಯೂಟೈಮ್ಸ್" ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಂಕ್ಷಿಪ್ತರೂಪ ಇದು.

ಕೇರಳ: ಕಮ್ಯೂನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್‌ಗಳಿಗೆ ನಿರ್ಧಾರ ಕೈಗೊಳ್ಳಬೇಕಾದ ಕ್ಷಣ

ಕೇರಳದ ವಿಧಾನಸಭೆಯ ನಾಲ್ಕು ಉಪಚುನಾವಣೆಗಳು ನಡೆದು ಕೆಲವು ವಾರಗಳು ಕಳೆದಿವೆ. ಈಗ ಎದ್ದಿರುವ ಪ್ರಶ್ನೆ ಎಂದರೆ, ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ದಾಪಿ ಎತ್ತ ಕಡೆಗೆ ಎಂಬುದು.

ಈ ಪ್ರಶ್ನೆ ಕೇರಳದ ಕಮ್ಯುನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್‌ಗಳ ಬಗ್ಗೆ ಮಾತ್ರ ಏಳುವುದಿಲ್ಲ. ಆ ಎರಡು ಪಕ್ಷಗಳ ಅಖಿಲಭಾರತ ನಾಯಕತ್ವದ ಸಂಬಂಧದಲ್ಲೂ ಏಳುತ್ತದೆ. ಏಕೆಂದರೆ, ಆ ಎರಡು ಪಕ್ಷಗಳು ಅಖಿಲಭಾರತ ಮಟ್ಟದಲ್ಲಿ ಘೋಷಿಸಿರುವ ನೀತಿಗಳಿಗೆ ಅವುಗಳ ಕೇರಳ ಘಟಕಗಳ ವರ್ತನೆಗಳು ಸವಾಲು ಹಾಕುತ್ತಿವೆ.

ಕೇರಳದಲ್ಲಿ ಮೇ 17ರಂದು ಉಪಚುನಾವಣೆಗಳು ನಡೆಯುತ್ತಿದ್ದ ದಿನ, ನವದೆಹಲಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಮೂವರು ಉನ್ನತ ನಾಯಕರು ಮತ್ತು ಕಾಂಗ್ರೆಸ್‌ನ ಸುಮಾರು ಅರ್ಧ ಡಜನ್ ಪ್ರಸಿದ್ಧ ನಾಯಕರು ಅಭಿಪ್ರಾಯ ವಿನಿಮಯಕ್ಕೆ ಸಭೆ ಸೇರಿದ್ದರು. ಇಂದಿರಾ ಕಾಂಗ್ರೆಸ್ ಪ್ರತಿನಿಧಿಸುವ ಸರ್ವಾಧಿಕಾರದ ಮತ್ತು ಆರೆಸ್ಸೆಸ್ ಪ್ರತಿನಿಧಿಸುವ ಕೋಮುವಾದದ ವಿರುದ್ಧ ಜಂಟಿ ಹೋರಾಟಗಳನ್ನು ಬೆಳೆಸುವುದರ ಬಗ್ಗೆ ಅವರು ಮಾತುಕತೆ ನಡೆಸಿದರು.

ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಸ್ವರಣ್‌ಸಿಂಗ್ ಅವರು ಇಂದಿರಾ ಕಾಂಗ್ರೆಸ್ ಜೊತೆ ರಾಜಿನೀತಿಯನ್ನು ಒಪ್ಪಿಕೊಂಡಾಗ ಅದನ್ನು ವಿರೋಧಿಸಿ ಕೇರಳದ ಉನ್ನತ ಕಾಂಗ್ರೆಸ್ ನಾಯಕ ಎ. ಕೆ. ಆಂಟೊನಿ ಅವರು ಕೆಲವು ತಿಂಗಳುಗಳ ಹಿಂದೆ ತಮ್ಮ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಇತ್ತು ಭಾರತದ ತಮ್ಮೆಲ್ಲ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡಿದ್ದರು.

ಆದರೆ ಈಗ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಇದೇ ಆಂಟೊನಿ ಅವರೇ ಇಂದಿರಾ ಕಾಂಗ್ರೆಸ್‌ನ (ದುಪ್ಪ ಕರುಣಾಕರನ್ ಇದಕ್ಕೆ ನಾಯಕರು) ರಾಜ್ಯಘಟಕಕ್ಕೆ ಕರೆ ನೀಡಿ, "ಮಾತೃಸಂಸ್ಥೆಗೆ ವಾಪಸ್ಸು ಬಂದು, ಕಾಂಗ್ರೆಸ್ ಅನ್ನು ಬಲಪಡಿಸಿ" ಎಂದು ಹೇಳಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್‌ಗೆ ಕಾಂಗ್ರೆಸ್ (ಐ) ಬಗ್ಗೆ ಯಾವುದೇ ಜಗಳ ಇಲ್ಲವೆಂದೂ, ಕಾಂಗ್ರೆಸ್ (ಐ)ನ ಅಖಿಲಭಾರತ ನಾಯಕತ್ವವನ್ನು ಮಾತ್ರ ಅದು ವಿರೋಧಿಸುವುದೆಂದೂ ವಿವರಿಸಲಾಗಿದೆ!

ಇದೇ ತರ್ಕವನ್ನು ಇತರ ರಾಜ್ಯಗಳಿಗೂ ಅನ್ವಯಿಸುವುದಾದರೆ, ಹರಿಯಾಣದಲ್ಲಿ ಕಾಂಗ್ರೆಸ್ (ಐ) ಬನ್ಸಿಲಾಲ್‌ರನ್ನು ಆಹ್ವಾನಿಸಬಹುದು, ಉತ್ತರಪ್ರದೇಶದಲ್ಲಿ ಎನ್. ಡಿ. ತಿವಾರಿಯವರನ್ನು ಕರೆಯಬಹುದು, ಹೀಗೇ ಏಪ್ಪೋ ಆಗಬಹುದು. ವಿಪರೀತ ಪ್ರಚಾರ ಪಡೆದ ಆಂಟೊನಿಯವರ ಮುಖ್ಯಮಂತ್ರಿ ಪದವಿಯ ರಾಜೀನಾಮೆಯು ವಿರುದ್ಧ ದಿಕ್ಕಿಗೆ ನಡೆದಿರುವುದು ಹೇಗೆ!

ಕಾಂಗ್ರೆಸ್ (ಐ) ಅನ್ನು ತನ್ನ ಜೊತೆ ಐಕ್ಯಮಾಡಿಕೊಂಡು "ಬಲ ಪಡೆದು" ಕೊಳ್ಳುವ ಕೇರಳದ ಕಾಂಗ್ರೆಸ್‌ನ ಪ್ರಯತ್ನವು, ಆಡಳಿತ ನಡೆಸುತ್ತಿರುವ ರಂಗದ ಇತರ ಎರಡು ಭಾಗಿಗಳಾದ ಮುಸ್ಲಿಮ್‌ಲೀಗ್ ಮತ್ತು ಕೇರಳ ಕಾಂಗ್ರೆಸ್‌ಗಳ ನಿಲುವುಗಳಿಗೆ ಸರಿಯಾಗಿಯೇ ಇದೆ. ಚುನಾವಣಾ ಫಲಿತಾಂಶಗಳ ಬಗ್ಗೆ ಅವರ ವಿವರಣೆ ಏನೆಂದರೆ ಸಮ್ಮಿಶ್ರ ಸರ್ಕಾರದ ಮೊದಲ ಎರಡು ಭಾಗಿಗಳಾದ ಕಾಂಗ್ರೆಸ್ (ಐ) ಮತ್ತು ಎನ್.ಡಿ.ಪಿ.ಗಳು ಸರ್ಕಾರವನ್ನು ತ್ಯಜಿಸಿದ್ದರಿಂದಲೇ ಸಮ್ಮಿಶ್ರರಂಗಕ್ಕೆ ಈ ಪೆಟ್ಟು ಬಿದ್ದಿದೆ ಎಂಬುದು. ಆದ್ದರಿಂದ ಸಮ್ಮಿಶ್ರ ಸರ್ಕಾರವನ್ನು ಬಿಟ್ಟ ಆ ಎರಡು ಪಕ್ಷಗಳನ್ನು ಪುನಃ ಕರೆತರಬೇಕು ಎಂದು ಮುಸ್ಲಿಮ್ ಲೀಗ್ ಅನೇಕತರದ ಮಾತುಗಳಲ್ಲಿ, ಕೇರಳ ಕಾಂಗ್ರೆಸ್ ಇನ್ನೂ ಪರೋಕ್ಷವಾಗಿ ಸೂಚಿಸಿವೆ.

ಕೇರಳದಲ್ಲಿ ಆಂಟೊನಿ ಕಾಂಗ್ರೆಸ್ ನವರು ಕಾಂಗ್ರೆಸ್ (ಐ)ಗೆ ಇತ್ತಿರುವ "ಆಹ್ವಾನ"ವು, ಕಾಂಗ್ರೆಸ್ (ಐ) ಬಗ್ಗೆ ತಳೆದಿರುವ ಅದೇ ಮನೋಭಾವದ ಇನ್ನೊಂದು ರೂಪ. ಆಳುತ್ತಿರುವ ಸಮ್ಮಿಶ್ರ ಸರ್ಕಾರದಲ್ಲಿ ತನ್ನ ಅಧಿಕಾರವನ್ನು ಹೆಚ್ಚಿಸಿಕೊಳ್ಳಲು "ಐಕ್ಯಗೊಂಡ ಕಾಂಗ್ರೆಸ್"ಅನ್ನು ಬಳಸಿಕೊಳ್ಳಲು ಕಾಂಗ್ರೆಸ್ ಆಶಿಸುತ್ತಿದೆ.

ಮರುಪರೀಕ್ಷೆ ಅಗತ್ಯ:

ಕಮ್ಯುನಿಸ್ಟ್‌ಪಕ್ಷ ಮತ್ತು ಕೇರಳ ಆರ್.ಎಸ್.ಪಿ.ಗಳು ಅಂಥದೇ ನಿಲುವನ್ನು ಸ್ಪಷ್ಟವಾಗಿ, ನೇರವಾಗಿ ತಳೆಯಲಾರವು. ಅವು, ಆಡಳಿತ ನಡೆಸುವ ಸಮ್ಮಿಶ್ರ ಸರ್ಕಾರದ ಎರಡು "ಎಡ" ಅಂಗಗಳಲ್ಲವೆ? ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನೂ ಸೇರಿಸಿಕೊಂಡು ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ರಚಿಸಬೇಕೆಂದು ಅವು ಒತ್ತಾಯಿಸುತ್ತಿಲ್ಲವೆ? (ಎಡ ಎಂದು ಭಾವಿಸಿಕೊಳ್ಳಬೇಕಾದ) ಆಡಳಿತ ನಡೆಸುವ ಸಮ್ಮಿಶ್ರ ಸರ್ಕಾರವನ್ನು ಸೇರಿ ಅದನ್ನು ಮತ್ತಷ್ಟು ಬಲಪಡಿಸದೆ, ಅದರ ಬಗ್ಗೆ "ನೇತ್ಯಾತ್ಮಕ ಮತ್ತು ದುಷ್ಟ" ಮನೋಭಾವ ತಳೆದಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಅವು ಸಾರ್ವಜನಿಕವಾಗಿ ದೂಷಿಸಿಲ್ಲವೆ?

ಆದರೆ, ಕಾಂಗ್ರೆಸ್, ಮುಸ್ಲಿಮ್ ಲೀಗ್ ಮತ್ತು ಕೇರಳ ಕಾಂಗ್ರೆಸ್‌ಗಳಂತೆಯೇ, ಇವೂ ಕೂಡ, ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದಲ್ಲಿ ತನಗಿರುವ ಸ್ಥಾನ ಮಾತ್ರ ಅಲುಗಾಡಬಾರದೆಂದು ಬಯಸುತ್ತವೆ. "ರಾಜ್ಯವಿಧಾನಸಭೆಗೆ ನಡೆದ ಇತ್ತೀಚಿನ ಉಪಚುನಾವಣೆಗಳಲ್ಲಿ ಪ್ರತಿಬಿಂಬಿತವಾದ (ಆಡಳಿತ ನಡೆಸುವ ಸಮ್ಮಿಶ್ರರಂಗದ) ದೌರ್ಬಲ್ಯಗಳು ಮತ್ತು ದೋಷಗಳನ್ನು ನಿವಾರಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ". ಎಂಬ ಹೇಳಿಕೆಯನ್ನು ಕೇರಳದ ರಾಜ್ಯ ಕಾರ್ಯಕಾರಿ ಸಮಿತಿ ಅಂಗೀಕರಿಸಿದ್ದು ಅದನ್ನು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿ ಒಪ್ಪಿಕೊಂಡಿದೆ. ಈ ಉದ್ದೇಶಕ್ಕಾಗಿ "ಸದ್ಯದ ಸಂಯುಕ್ತರಂಗವು ತನ್ನ ವಿಸ್ತರಣೆಯನ್ನಾಗಲೀ ಅಥವಾ ಹೊಸ ಕಾರ್ಯಕ್ರಮವನ್ನು ಅಂಗೀಕರಿಸುವುದನ್ನಾಗಲೀ ವಿರೋಧಿಸುವುದಿಲ್ಲ". ಎಂದು ರಾಜ್ಯ ಕಾರ್ಯಕಾರಿ ಸಮಿತಿ ಹೇಳಿದೆ.

ಈಗ ಆಡಳಿತ ನಡೆಸುತ್ತಿರುವ ಸಮ್ಮಿಶ್ರರಂಗವು ಅನುಭವಿಸಿದ ರಾಜಕೀಯ ಸೋಲು, ಇಡೀ ಸಮ್ಮಿಶ್ರರಂಗದ ರಾಜಕೀಯ ತಳಹದಿಯ ಮರು ಪರೀಕ್ಷೆಯ ಅಗತ್ಯವನ್ನು ಹೇಳುತ್ತದೆ ಎಂಬುದನ್ನು ಅರಿತುಕೊಳ್ಳಲು ರಾಜ್ಯ ಕಾರ್ಯಕಾರಿ ಸಮಿತಿಯಾಗಲೀ ಕೇಂದ್ರ ಕಾರ್ಯಕಾರಿ ಸಮಿತಿಯಾಗಲೀ ಸಿದ್ಧವಿಲ್ಲ. ಅಧಿಕಾರದಲ್ಲಿ ಪಾಲು ಪಡೆಯುವುದೇ

ಇ.ಎಂ.ಎಸ್. ನಂಬೂದಿರಿಪಾದ್

ಅವರ ರಾಜಕೀಯದ ಸರ್ವಸ್ವವಾಗಿರುವಾಗ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಊಹೆಗೂ ಈ ವಿಚಾರ ನಿಲುಕುವುದಿಲ್ಲ.

ಚರಿತ್ರೆಯ ಸಂಗತಿಗಳು:

ಇತಿಹಾಸದ ಕೆಲವು ಸಂಗತಿಗಳನ್ನು ಈಗ ನೆನೆಸಿಕೊಳ್ಳೋಣ. 1967-69ರ ಐಕ್ಯ ಕಾಂಗ್ರೆಸ್ ಮತ್ತು ಕಾಂಗ್ರೆಸ್ ವಿರೋಧಿ ಸಂಯುಕ್ತರಂಗದ ಕೆಲವು ಸಹಭಾಗಿಗಳು ಸೇರಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿದ್ದ ವಾಮವಾದಿ ಸರ್ಕಾರವು ರಾಜೀನಾಮೆ ನೀಡುವಂತೆ ಮಾಡಿದ ಪಿತೂರಿಯ ಮುಂದುವರಿಕೆಯೇ ಈ ಸದ್ಯದ ಆಡಳಿತ ನಡೆಸುವ ಸಮ್ಮಿಶ್ರರಂಗ ಆಗಿದೆ. ಇಂದಿರಾಗಾಂಧಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷದ ಅಖಿಲಭಾರತ ನಾಯಕತ್ವಗಳು ಕೇರಳದ ಇತರ ಪ್ರಾದೇಶಿಕ ಪಕ್ಷಗಳಾದ ಮುಸ್ಲಿಮ್ ಲೀಗ್ ಮತ್ತು ಕೇರಳಕಾಂಗ್ರೆಸ್‌ಗಳ ಹೊಂದಾಣಿಕೆಯೇ 1977ರ ಮಾರ್ಚಿಯ ಸಾರ್ವಜನಿಕ ಚುನಾವಣೆಗಳವರೆಗಿನ ಹೊಸ ಸಮ್ಮಿಶ್ರರಂಗದ ರಾಜಕೀಯ ಸತ್ವವಾಗಿತ್ತು. ಹೀಗೆ ಸದ್ಯದ ಸಮ್ಮಿಶ್ರರಂಗವು ಆ ಮೂಲದಿಂದ ಬಂದು, ಮಾರ್ಕ್ಸ್‌ವಾದಿ ಪಕ್ಷದ ಬಗೆಗಿನ ದ್ವೇಷವನ್ನು ಮುಂದುವರೆಸಿದೆ.

1977ರ ಚುನಾವಣೆಯಲ್ಲಿ 140 ಸ್ಥಾನಗಳಲ್ಲಿ 111 ಸ್ಥಾನಗಳನ್ನು ಅದು ಪಡೆದುಕೊಂಡಿದ್ದರೂ ಸಹ, ಆಳುವ ಸಮ್ಮಿಶ್ರರಂಗಕ್ಕೆ ಶೇ. 50 ರಷ್ಟು ಮತಗಳು ಮಾತ್ರ ಬಂದಿವೆ ಎಂಬುದನ್ನೂ ನೆನೆಸಿಕೊಳ್ಳಬೇಕು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ವಿರೋಧಿರಂಗವು ಕೇವಲ 29 ಸ್ಥಾನಗಳನ್ನು ಪಡೆದುಕೊಂಡಿದ್ದರೂ ಸಹ, ಶೇ. 45 ರಷ್ಟು ಮತಗಳನ್ನು ಪಡೆದಿದೆ. ಮೂರು ಲೋಕಸಭೆ ಚುನಾವಣೆಗಳು ಮತ್ತು ಅನೇಕ ರಾಜ್ಯ ವಿಧಾನಸಭೆಗಳಲ್ಲಿ ಜಯಪಡೆದು ತನ್ನ ಅತ್ಯುತ್ತಮ ಅಧಿಕಾರದ ದಿನಗಳಲ್ಲಿ ಕಾಂಗ್ರೆಸ್‌ಗೆ ಇದ್ದಷ್ಟು ಮತ ಬೆಂಬಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ವಿರೋಧಿರಂಗಕ್ಕೆ ಇದೆಯೆಂಬುದನ್ನು ಗಮನಿಸಬೇಕು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ವಿರೋಧಿಯಾದ ಶಕ್ತಿಗಳ ಒಕ್ಕೂಟದ ಸಹಾಯದಿಂದ ಸಮ್ಮಿಶ್ರರಂಗವು "ಅಪಾರ" ಗೆಲುವು ಪಡೆಯಲು ಸಾಧ್ಯವಾಗಿದೆಯಷ್ಟೆ. ಅಲ್ಲದೆ, ಅದರ ಮತದಾರ ಬೆಂಬಲ ಮತ್ತು ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ವಿರೋಧಿರಂಗದ ಮತದಾರ ಬೆಂಬಲಗಳಿಗಿರುವ ಅಂತರ ತುಂಬ ಕಡಿಮೆಯಾದದ್ದು.

ಇದು ನಡೆದ ಎರಡುವರ್ಷಗಳ ಅವಧಿಯಲ್ಲಿ ಆಳುವ ಸಮ್ಮಿಶ್ರರಂಗ ಮತ್ತು ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ವಿರೋಧಿರಂಗಗಳಿಗೆ ಇರುವ ಮತದಾರಬೆಂಬಲದಲ್ಲಿ ದೊಡ್ಡ ಬದಲಾವಣೆಯಾಗಿದೆ. ಈ ಅವಧಿಯಲ್ಲಿ ವಿಧಾನಸಭೆಗೆ ಆರು ಉಪಚುನಾವಣೆಗಳು ನಡೆದಿದ್ದು, ಆಳುವ ಸಮ್ಮಿಶ್ರರಂಗ ಒಂದೇ ಒಂದು ಕಡೆ ಮಾತ್ರ ಗೆದ್ದಿದೆ. ಅವರು ಕಳೆದುಕೊಂಡ ಮಿಕ್ಕ ಐದು ಸ್ಥಾನಗಳನ್ನು ಸಮ್ಮಿಶ್ರರಂಗದ ಒಂದಲ್ಲ ಒಂದು ಸಹಭಾಗಿಗಳು ಹಿಂದೆ ಪಡೆದುಕೊಂಡಿದ್ದರು. ಈಗ ಆಳುವ ಸಮ್ಮಿಶ್ರರಂಗದ ಆಟ ಮುಗಿದು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಪರ ಒಲವು ಬೆಳೆಯುತ್ತಿದೆಯೆಂಬುದು ಸ್ಪಷ್ಟವಾಗುವುದು.

ಅಂಕಿಸಂಖ್ಯೆಗಳು ತೋರುವ ಸತ್ಯ:

ಆರು ಕ್ಷೇತ್ರಗಳ ಮತದಾನದ ಸಂಖ್ಯೆಗಳು ಇನ್ನೂ ಹೆಚ್ಚು ವಿಚಾರಗಳನ್ನು ತೋರಿಸುತ್ತವೆ.

ಆಳುವ ಸಮ್ಮಿಶ್ರರಂಗ ಗೆದ್ದ ಕಾಜಕ್ಕೂಟಮ್ ಸ್ಥಾನದಲ್ಲಿ, ವಿರೋಧಪಕ್ಷಕ್ಕೆ ಬಂದ ಮತಗಳು 1977ರಲ್ಲಿ 22,637 ಇದ್ದರೆ, ಅದೇ ವರ್ಷದ ಅಕ್ಟೋಬರ್‌ನಲ್ಲಿ 29,794 ಇತ್ತು. ಎಂದರೆ 7100 ಮತಗಳು ಹೆಚ್ಚಾದವು. ಆಳುವ ಸಮ್ಮಿಶ್ರರಂಗದ ಮತಗಳು 37.014 ರಿಂದ 38,463ಕ್ಕೆ ಎಂದರೆ ಕೇವಲ 1400 ಮತಗಳು ಮಾತ್ರ ಹೆಚ್ಚಾದವು.

ಪೂರ್ವ ತಿರುವನಂತಪುರದಲ್ಲಿ, ವಿರೋಧಪಕ್ಷಕ್ಕೆ 22,802ರಿಂದ 23,981 ಮತಗಳು ಎಂದರೆ 1100 ಮತಗಳು ಹೆಚ್ಚಿದವು. ಆಳುವ ಸಮ್ಮಿಶ್ರರಂಗದ ಮತಗಳು 33,405 ರಿಂದ 20,645ಕ್ಕೆ ಎಂದರೆ 12,700 ಮತಗಳಷ್ಟು ಇಳಿದವು. ಅಲ್ಲದೆ ಆಳುವ ಸಮ್ಮಿಶ್ರರಂಗವು ಮೂರನೇ ಸ್ಥಾನಕ್ಕೆ ಎಂದರೆ ಕಾಂಗ್ರೆಸ್ (ಐ)ಗಿಂತ ಕೆಳಗೆ ಇಳಿಯಿತು.

ಕಾಸರಗೋಡಿನಲ್ಲಿ ವಿರೋಧಪಕ್ಷಕ್ಕೆ 200 ಮತಗಳು ಕಡಿಮೆಯಾದವು. ಎಂದರೆ 22,690 ರಿಂದ 22,419ಕ್ಕೆ ಇಳಿಯಿತು. ಸಮ್ಮಿಶ್ರರಂಗವು 8000 ಮತಗಳನ್ನು ಕಳೆದುಕೊಂಡಿತು ಎಂದರೆ 29,402 ರಿಂದ 21,269ಕ್ಕೆ ಮತ ಸಂಖ್ಯೆ ಇಳಿಯಿತು.

1977ರಲ್ಲಿ ವಿರೋಧಪಕ್ಷ ಗೆದ್ದಿದ್ದ ಏಕಮಾತ್ರ ಸ್ಥಾನವಾದ ತೆಲ್ಲಿಚೇರಿಯಲ್ಲಿ 38,419 ರಿಂದ 44,457 ರಷ್ಟು ಮತಗಳು ಹೆಚ್ಚಿದವು. ಎಂದರೆ 6000 ಮತಗಳು ಸ್ಪಷ್ಟವಾಗಿ ಹೆಚ್ಚು ಬಂದವು. ಸಮ್ಮಿಶ್ರರಂಗದ ಮತಗಳು 29,946 ರಿಂದ 23,799ಕ್ಕೆ ಇಳಿದು, ಸ್ಪಷ್ಟವಾಗಿ 6100 ಮತಗಳು ಕಡಿಮೆಯಾದವು. ಕಾಂಗ್ರೆಸ್ (ಐ) ಗಳಿಸಿಕೊಂಡ 5276 ಮತಗಳನ್ನು ಆಳುವರಂಗಕ್ಕೆ ಸೇರಿಸಿದರೂ ಕೂಡ, 1977 ರಲ್ಲಿ ಅದು ಗಳಿಸಿದ ಮತಗಳಿಗಿಂತ 1000 ಮತ ಕಡಿಮೆಯಾಗುತ್ತದೆ.

ತಿರುವಲ್ಲದಲ್ಲಿ ವಿರೋಧಿರಂಗದ ಮತಗಳು 6000 ದಷ್ಟು ಹೆಚ್ಚಾದವು. ಎಂದರೆ 24.513, ರಿಂದ 30,552 ಕ್ಕೆ ಮತಗಳು ಏರಿದವು. ಸಮ್ಮಿಶ್ರ ಸರ್ಕಾರದ ಮತಗಳು 31,548 ರಿಂದ 24.863ಕ್ಕೆ ಇಳಿದವು. ಎಂದರೆ 7000 ಮತಗಳು ಕಡಿಮೆಯಾದವು.

ಪರಸ್ಸಾಲದಲ್ಲಿ ವಿರೋಧಿರಂಗದ ಮತಗಳು 6900 ರಷ್ಟು, ಎಂದರೆ 21,084 ರಿಂದ 27,986 ಕ್ಕೆ ಮತಗಳು ಹೆಚ್ಚಿದವು. ಆಳುವ ಸಮ್ಮಿಶ್ರರಂಗದ ಮತಗಳು 16,400 ದಷ್ಟು ಕಡಿಮೆಯಾದವು. ಎಂದರೆ 35,485 ರಿಂದ 19,068ಕ್ಕೆ ಇಳಿಯಿತು.

ಮೇಲೆ ಹೇಳಿದ ಮತದಾನದ ಅಂಕಿಸಂಖ್ಯೆಗಳಲ್ಲಿ ಕಾಜಕ್ಕೂಟಮ್ ಮತ್ತು ತೆಲ್ಲಿಚೇರಿಗೆ ಸಂಬಂಧಿಸಿದವು ಮುಖ್ಯವಾಗಿ ಗಮನಾರ್ಹವಾದುವು. ಏಕೆಂದರೆ, ಕಾಜಕ್ಕೂಟಮ್‌ನಲ್ಲಿ ಕಾಂಗ್ರೆಸ್ ಒಡೆಯುವುದಕ್ಕೆ ಮುಂಚೆ ಚುನಾವಣೆ ನಡೆದಿದ್ದು, ಮುಂದೆ ಕಾಂಗ್ರೆಸ್ (ಐ)ಗೆ ಸೇರಿದ ಕರುಣಾಕರನ್ ಸಮ್ಮಿಶ್ರರಂಗದ ಅಭ್ಯರ್ಥಿ ಎ. ಕೆ. ಆಂಟೊನಿಯವರ ಪರ ಪ್ರಚಾರಮಾಡಿದ್ದರು. ಸಮ್ಮಿಶ್ರರಂಗದ ಅಭ್ಯರ್ಥಿಗೆದ್ದರೂ ವಿರೋಧಪಕ್ಷದ ಅಭ್ಯರ್ಥಿಗೆ 6000 ಮತಗಳು ಹೆಚ್ಚಿಗೆ ಬಂದಿದ್ದವು. ತೆಲ್ಲಿಚೇರಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, ಕಾಂಗ್ರೆಸ್ (ಐ), ಸಮ್ಮಿಶ್ರರಂಗದ ವಿರುದ್ಧ ಪಟ್ಟೇ

[5ನೇ ಪುಟ ನೋಡಿ]

ವಾಮರಂಗ ಸರ್ಕಾರದ ಪಿತೂರಿಗಾರರಿಗೆ ಚರಿತ್ರಾರ್ಹ ರ್‍ಯಾಲಿಯ ಎಚ್ಚರಿಕೆ

—ಸುಬ್ರತ್ ಪಾಲ್

ಅವರೆಲ್ಲ ಲಕ್ಷಸಂಖ್ಯೆಯಲ್ಲಿ ಬಂದರು. ಹಳ್ಳಿಗಳಿಂದ ನಗರಗಳಿಂದ ಬಂದರು. ಜಿಲ್ಲೆಗಳು ಬರಗಾಲ ಪರಿಸ್ಥಿತಿಗಳಿಂದ ನರಳುತ್ತಿವೆ. ಕಲ್ಕತ್ತದಲ್ಲಿ 43 ಡಿಗ್ರಿಗಳ ಬಿಸಿಲು ಇದೆ. ಜಿಲ್ಲೆಗಳಲ್ಲಿ ಇನ್ನೂ ಜಾಸ್ತಿಯಾಗಿದೆ. ಆದರೆ ಜನರನ್ನು ಯಾವುದೂ ತಡೆಯಲಿಲ್ಲ. ಅವರಿಗೆ ತಮ್ಮ ಜೀವಗಳಿಗಿಂತ, ರಕ್ತ ಮತ್ತು ಬಲಿದಾನದ ಮೂಲಕ ಸ್ಥಾಪಿಸಲ್ಪಟ್ಟ ವಾಮರಂಗ ಸರ್ಕಾರವೇ ಹೆಚ್ಚು ಅಮೂಲ್ಯವಾದುದು. ಆದ್ದರಿಂದಲೇ, ವಾಮರಂಗ ಸರ್ಕಾರಕ್ಕೆ ತಮ್ಮ ದೃಢ ಬೆಂಬಲ ವ್ಯಕ್ತಪಡಿಸಿ, ಅದರ ವಿರುದ್ಧವಾದ ಪಿತೂರಿಗಳನ್ನು ನೆಲಸಮ ಮಾಡಲು ವಾಮ ಪಕ್ಷಗಳು ಈ ರ್‍ಯಾಲಿಯ ಕರೆಕೊಟ್ಟಾಗ, ಅವರು ಎಲ್ಲ ಸಂಕಷ್ಟಗಳನ್ನೂ ತಡೆದುಕೊಂಡು ಕುತೂಹಲಬರಿತರಾಗಿ ಬಂದರು. ಜೂನ್ ಎರಡರ ರ್‍ಯಾಲಿ ನಿಜವಾಗಿ ಚರಿತ್ರಾರ್ಹವಾಗಿತ್ತು.

ಕಲ್ಕತ್ತಕ್ಕೆ ಬರುವ ಎಲ್ಲ ವಾಹನಗಳು ಕಿಕ್ಕಿರಿದಿದ್ದವು. ರೈಲುಗಳು ಎಷ್ಟು ತುಂಬಿಹೋಗಿದ್ದವೆಂದರೆ ಅನೇಕರು ಅಪಾಯಕಾರಿಯಾಗಿ ಬೋಗಿಗಳಾಚೆ ತೂಗಾಡುತ್ತಿದ್ದರು. ಕೆಲವು ದುರಂತ ಅಪಘಾತಗಳೂ ಸಂಭವಿಸಿದವು. ಏಳು ಜನರು ಕಿಕ್ಕಿರಿದ ರೈಲುಗಳಿಂದ ಬಿದ್ದು ಸತ್ತರು. ಅನೇಕರಿಗೆ ಗಾಯಗಳಾದವು. ತಮ್ಮ ವಾಮರಂಗ ಸರ್ಕಾರವನ್ನು ಅದರ ಶತ್ರುಗಳ ದಾಳಿಯಿಂದ ರಕ್ಷಿಸಲು ರ್‍ಯಾಲಿ ಸೇರಲು ರಾಜ್ಯದ, ನಗರದ ಮತ್ತು ಪಟ್ಟಣದ ಜನರು ಯಾವ ಅಪಾಯವನ್ನೆದುರಿಸಲೂ ಸಿದ್ಧರಾಗಿದ್ದರು.

ಜೂನ್ ಎರಡರಂದು ಕಲ್ಕತ್ತ ನಿಜವಾಗಿ "ಮೆರವಣಿಗೆಗಳ ನಗರ"ವಾಗಿತ್ತು. ಮುಂಜಾವಿನಿಂದಲೂ ನಗರದ ಬೀದಿಗಳು, ರ್‍ಯಾಲಿಯ ಸ್ಥಳವಾದ ಬ್ರಿಗೇಡ್ ಪೆರೇಡ್‌ಗ್ರೌಂಡಿನ ಕಡೆಗೆ ಹೋಗುವ ಮೆರವಣಿಗೆಗಳಿಂದ ತುಂಬಿಹೋಗಿದ್ದವು. ಹಾಗೆ ನೋಡಿದರೆ ಜನರು ಒಂದು ದಿನ ಮುಂಚಿತವಾಗಿಯೇ ಸೀಲ್ಡಾ ಮತ್ತು ಹೌರಾ ಸ್ಟೇಷನ್ನುಗಳಿಗೆ ಬರಲಾರಂಭಿಸಿದ್ದರು.

ಸೂರ್ಯ ಮೇಲೇರಿದ ಹಾಗೆ, ಬಿಸಿಲು ತಡೆಯಲಸಾಧ್ಯವಾಯಿತು. ನಗರ ಮತ್ತು ಸುತ್ತಲಿನ ಜಿಲ್ಲೆಗಳಲ್ಲಿ ಉಷ್ಣಗಾಳಿ ಬೀಸುತ್ತಿತ್ತು. ನಗರದ ಲೋಹದ ರಸ್ತೆಗಳ ಮೇಲಿನ ಡಾಂಬರು ಕರಗುತ್ತಿತ್ತು. ಹಾಗಿದ್ದರೂ ಕೊನೆಯಿಲ್ಲದೆ ಮೆರವಣಿಗೆಗಳು ಸಾಗುತ್ತಿದ್ದವು. ಅನೇಕರು ಬರಿಗಾಲಿನಲ್ಲಿದ್ದ ಸಾವಿರಾರು ಗ್ರಾಮೀಣರನ್ನು ಕರಗಿದ ಡಾಂಬರು ಸುಡುತ್ತಿತ್ತು. ಆದರೂ ಅವರು ನಿಲ್ಲಿಸಲಿಲ್ಲ.

ತೀರ ಉತ್ತರದ ಕಡೆಗಿದ್ದ ಜಿಲ್ಲೆಗಳಿಂದ ಬಿಟ್ಟರೆ ಎಲ್ಲ ಜಿಲ್ಲೆಗಳಿಂದಲೂ ಜನರು ಬಂದರು. ಒಂದು ಗಂಟೆಯ ಹೊತ್ತಿಗೆ ರ್‍ಯಾಲಿಯ ಜಾಗದಲ್ಲಿ ಎರಡು ಲಕ್ಷಕ್ಕಿಂತಲೂ ಹೆಚ್ಚು ಜನ ಸೇರಿದ್ದರು. ನಂತರ 24 ಪರ್ಗಾಣಗಳು, ಹೌರಾ ಮತ್ತು ಹೌರಾ ಜಿಲ್ಲೆಗಳ ಬೃಹತ್ ಮೆರವಣಿಗೆಗಳು ಬಂದು ಬ್ರಿಗೇಡ್ ಪರೇಡ್‌ಗ್ರೌಂಡನ್ನು ತುಂಬಿದವು. ನಗರದ ಎಲ್ಲ ಮೂಲೆಗಳಿಂದಲೂ ದೀರ್ಘ ಮೆರವಣಿಗೆಗಳು ಬಂದು ಸೇರಿದವು. ರ್‍ಯಾಲಿಯಲ್ಲಿ ಕಾರ್ಮಿಕರು ಮತ್ತು ರೈತರು ಭಾಗವಹಿಸಿದ ರೀತಿ, ನೋಡುವವರ ಮೇಲೆ ಪ್ರಭಾವ ಬೀರಿತು. ಹೊಸ ವಿಚಾರ ಎಂದರೆ ನೂರಾರು ಜನ ನ್ಯಾಯವಾದಿಗಳು ಮೆರವಣಿಗೆಯಲ್ಲಿ ಬಂದು ರ್‍ಯಾಲಿಗೆ ಸೇರಿದ್ದು.

ಇದು ಇತ್ತೀಚಿನ ದಿನಗಳ ಅತಿ ದೊಡ್ಡ ರ್‍ಯಾಲಿ ಎಂಬುದು ಪ್ರಶ್ನಾತೀತವಾಗಿತ್ತು. ಇಂಥ ವಿಪರೀತ ಬಿಸಿಲಿನಲ್ಲಿ ಅಂಥ ದೊಡ್ಡ ಗುಂಪು ಸೇರಿದ್ದನ್ನು ಇದುವರೆಗೆ ನಗರ ಕಂಡಿರಲಿಲ್ಲ.

ಈ ಚರಿತ್ರಾರ್ಹ ರ್‍ಯಾಲಿಯ ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ಸಮಿತಿಯ ಕಾರ್ಯದರ್ಶಿಗಳೂ ವಾಮರಂಗ ಸಮಿತಿಯ ಅಧ್ಯಕ್ಷರೂ ಆದ ಕಾಮ್ರೇಡ್ ಪ್ರಮೋದ್‌ದಾಸ್‌ಗುಪ್ತ ಅವರು ವಹಿಸಿದ್ದರು.

ವಾಮರಂಗ ಸರ್ಕಾರದ ವಿರುದ್ಧ ದುಷ್ಟಶಕ್ತಿಗಳು ಮತ್ತು ಪ್ರತಿಗಾಮಿ ಶಕ್ತಿಗಳು ನಡೆಸುವ ಪಿತೂರಿಗಳನ್ನು ನೆಲಸಮ ಮಾಡುವಂತೆ, ಕಾಮ್ರೇಡ್ ದಾಸ್‌ಗುಪ್ತ ಅವರು ಸಭೆಯ ಮುಂದೆ ಮಂಡಿಸಿದ ಗೊತ್ತುವಳಿಯು ರಾಜ್ಯದ ಜನತೆಗೆ ಕರೆ ಕೊಟ್ಟಿತು.

ದುಷ್ಟಶಕ್ತಿಗಳನ್ನು ನಾಶಗೊಳಿಸದೆ, ವಾಮರಂಗದ 36 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಗೊತ್ತುವಳಿ ಹೇಳಿತು. ಕಾರ್ಮಿಕರ, ರೈತರ, ಕೃಷಿಕಾರ್ಮಿಕರ, ನೌಕರರ ಮತ್ತು ಶ್ರಮಜೀವಿವರ್ಗದ ಇತರರ ಬೇಡಿಕೆಗಳನ್ನು ಪೂರೈಸಬೇಕಾದರೆ, ಏಕಸ್ವಾಮ್ಯದಾರರ, ದೊಡ್ಡ ಭೂಮಾಲೀಕರ, ಜಮೀನ್ದಾರರ ಹಿತಾಸಕ್ತಿಗಳನ್ನು ಉರುಳಿಸಲೇಬೇಕು. ಈ ದುಷ್ಟಶಕ್ತಿಗಳ ವಿರುದ್ಧದ ಜನತೆಯ ಚಳುವಳಿಗಳು ಹೆಚ್ಚು ಒಗ್ಗಟ್ಟಿನಿಂದ ವಿಶಾಲವಾಗುತ್ತ ನಡೆದಷ್ಟೂ, ಈ ದುಷ್ಟ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷ ಹೆಚ್ಚು ಹೆಚ್ಚು ನಿರಾಶರಾಗುತ್ತಾರೆ.

ರಾಜ್ಯದ ಜನತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಕೂಡ, ವಾಮರಂಗ ಸರ್ಕಾರದ ಬಗೆಗಿನ ಅಪಪ್ರಚಾರದಿಂದ ಪ್ರಭಾವಿತರಾಗುವುದಿಲ್ಲ ಎಂದು ಗೊತ್ತುವಳಿ ಸೂಚಿಸಿತು. ಸರ್ಕಾರವು ತನ್ನ ಮಿತ ಅಧಿಕಾರ ಮತ್ತು ಸಂಪನ್ಮೂಲಗಳಿಂದಲೇ ತಮ್ಮ ಹಿತಾಸಕ್ತಿಗಳನ್ನು ಹೇಗೆ ರಕ್ಷಿಸುತ್ತಿದೆ ಎಂಬುದನ್ನು ಅವರೇ ಗಮನಿಸಿದ್ದಾರೆ. ಈ ಸರ್ಕಾರವು ಎಲ್ಲರಿಗೂ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ಪುನಃ ಕೊಟ್ಟಿದೆ. ಮತ್ತು ಇದರ ಸಹಾಯದಿಂದ ಶ್ರಮಜೀವಿವರ್ಗದ ಎಲ್ಲ ಗುಂಪುಗಳು ಗಮನಾರ್ಹ ಲಾಭಪಡೆದಿದ್ದಾರೆ.

ಹಿಂದಿನ ಎಲ್ಲಾ ಸಂದರ್ಭಗಳಲ್ಲಿ ಮಾಡಿರುವ ಹಾಗೆ, ಪಶ್ಚಿಮ ಬಂಗಾಳದ ಜನತೆಯು ದುಷ್ಟ ಮತ್ತು ಪ್ರತಿಗಾಮಿ ಶಕ್ತಿಗಳ ಎಲ್ಲ ಪಿತೂರಿಗಳನ್ನು ಸೋಲಿಸುವುದೆಂಬ ಭರವಸೆಯನ್ನು ಗೊತ್ತುವಳಿ ವ್ಯಕ್ತಪಡಿಸಿತು. ವಾಮರಂಗ ಸರ್ಕಾರಕ್ಕೆ ಎಲ್ಲ ದಿಕ್ಕುಗಳಿಂದ ಬರುವ ಆಕ್ರಮಣಗಳನ್ನು ವಾಮರಂಗದ ದೃಢ ಐಕ್ಯತೆ ಹಿಮ್ಮೆಟ್ಟಿಸುವುದೆಂದು ಗೊತ್ತುವಳಿ ಹೇಳಿತು.

ಜನತೆಯಿಂದ ತಾವು ದೂರವಾಗುತ್ತ ಇರುವುದನ್ನು ಗಮನಿಸಿಕೊಳ್ಳುತ್ತಿರುವ ಹಾಗೇ, ವಾಮರಂಗ ಸರ್ಕಾರದ ಜನಪ್ರಿಯತೆಯು ಅದರ ಶತ್ರುಗಳ ದನಿಯನ್ನು ಕುಗ್ಗಿಸುತ್ತಿದೆ ಎಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಜ್ಯೋತಿಬಸು ಅವರು ಹೇಳಿದರು. ವಾಮರಂಗ ಸರ್ಕಾರವು ಪೂರ್ಣ ಅವಧಿಯ ಐದು ವರ್ಷಗಳಲ್ಲೂ ಮುಂದುವರೆದರೆ ಅವರು ತಮ್ಮ ಹಣೆಬರಹದ ಬಗ್ಗೆ ಯೋಚಿಸುವುದು ಸಹಜ ಎಂದೂ ಅವರು ಹೇಳಿದರು.

ಮಿಕ್ಕ ಎಲ್ಲ ರಾಜ್ಯಗಳಿಗಿಂತಲೂ ಶಾಂತಿ ಮತ್ತು ಶಿಸ್ತುಗಳು ಇಲ್ಲಿ ಉತ್ತಮವಾಗಿದೆಯೆಂದು ಅವರು ಒತ್ತಿ ಒತ್ತಿ ಹೇಳಿದರು. ಕೋಮುಸೌಹಾರ್ದ ಇಲ್ಲಿ ಗಮನಾರ್ಹವಾಗಿದ್ದು, ಹರಿಜನರು ಮತ್ತು ಗಿರಿಜನರು ಇಲ್ಲಿ ದಬ್ಬಾಳಿಕೆಯ ಭಯವಿಲ್ಲದೆ ಬದುಕುತ್ತಿದ್ದಾರೆ ಎಂದರು.

ವಾಮರಂಗ ಸರ್ಕಾರವು ರಾಜ್ಯದಲ್ಲಿ ಕಾನೂನಿನ ಆಡಳಿತವನ್ನು ತಂದಿದೆ. ವಿರೋಧ ಪಕ್ಷಗಳು ಕೂಡ ಪುನಃಸ್ಥಾಪಿತವಾದ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ಅನುಭವಿಸುತ್ತಿದ್ದಾರೆ ಎಂದು ಕಾಮ್ರೇಡ್ ಬಸು ಹೇಳಿದರು. ಪ್ರತಿಗಾಮಿ ಉದ್ದೇಶಗಳಿಗಾಗಿ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ದಮನಮಾಡಲೆತ್ನಿಸುವವರನ್ನು ವಿಚಾರಿಸಿಕೊಳ್ಳುವ ಬಲ ವಾಮರಂಗ ಸರ್ಕಾರ

[6ನೇ ಪುಟ ನೋಡಿ]

……ನಿರ್ಧಾರ ಕೈಗೊಳ್ಳಬೇಕಾದ ಕ್ಷಣ

[4ನೇ ಪುಟದಿಂದ]

ಅಲ್ಲ ಆರೆಸ್ಸೆಸ್‌ನ ವಿರುದ್ಧವೂ ಪ್ರಚಾರ ನಡೆಸಿತು. ಹೀಗಿದ್ದರೂ 6000 ಮತಗಳಿಂದ ಅದು ಸ್ಥಾನವನ್ನು ಗೆದ್ದಿತು.

ಸಮ್ಮಿಶ್ರರಂಗ ಪತನಗೊಳ್ಳಲಿದೆ:

ಇತ್ತೀಚೆಗೆ ನಡೆದ ನಾಲ್ಕು ಉಪಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ವಿರೋಧಿರಂಗವು ಶೇಕಡಾ 46 ರಷ್ಟು ಮತಗಳನ್ನು ಗಳಿಸಿದರೆ ಆಳುವ ಸಮ್ಮಿಶ್ರರಂಗವು ಕೇವಲ ಶೇಕಡಾ 32 ರಷ್ಟು ಮತಗಳಿಸಿದೆ ಎಂಬ ಅಂಶವು ಗಮನಾರ್ಹವಾದುದು. ಈಗೇನಾದರೂ ಸಾರ್ವಜನಿಕ ಚುನಾವಣೆ ನಡೆಸಿದರೆ ಸಮ್ಮಿಶ್ರರಂಗ ಸರಿಯಾದ ಪತನವನ್ನು ಅನುಭವಿಸುತ್ತದೆಯೆಂಬುದು ಸ್ಪಷ್ಟ.

ಈ ವಾಸ್ತವ ಸಂಗತಿಯನ್ನೇ ಕಮ್ಯುನಿಸ್ಟ್ ಪಕ್ಷದ ನಾಯಕರು ಒಪ್ಪಿಕೊಳ್ಳಲು ತಯಾರಿಲ್ಲ. ಹೀಗಾಗಿ ತಮ್ಮ ನಿರಂತರ ಹಿಡಿತದಲ್ಲಿರುವ ಸಮ್ಮಿಶ್ರರಂಗವನ್ನು ಮುಂದುವರೆಸಲು ಅವರು ಉತ್ಸುಕರಾಗಿದ್ದಾರೆ. ಬೀಳಲಿರುವ ಸಮ್ಮಿಶ್ರರಂಗಕ್ಕೆ ಆಧಾರವಾಗಿ ಬರುವಂತೆ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಆರ್ತವಾಗಿ ಮನವಿ ಮಾಡುತ್ತಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಸಮ್ಮಿಶ್ರರಂಗಕ್ಕೆ ಇರುವ ನಗ್ನ ವಿರೋಧವನ್ನು ಉಳಿಸಿಕೊಂಡರೆ ತಾವು ಚುನಾವಣೆಯಲ್ಲಿ ಜಯಗಳಿಸಬಹುದೆಂದು ಕಾಂಗ್ರೆಸ್ (ಐ), ಕೇರಳ ಕಾಂಗ್ರೆಸ್ ಮತ್ತು ಮುಸ್ಲಿಮ್‌ಲೀಗ್‌ಗಳು ಕಂಡುಕೊಂಡಿವೆ. ಆದ್ದರಿಂದಲೇ ಮಾರ್ಕ್ಸ್‌ವಾದಿ ಪಕ್ಷಕ್ಕೆ ವಿರೋಧ ರಂಗವನ್ನು ಕಟ್ಟಲು ಕಾಂಗ್ರೆಸ್ (ಐ) ನೀಡಿದ ಕರೆಗೆ ಕೇರಳ ಕಾಂಗ್ರೆಸ್ ಮತ್ತು ಮುಸ್ಲಿಮ್‌ಲೀಗ್‌ಗಳು ಓಗೊಟ್ಟಿವೆ.

ಆಂಟೊನಿಯವರ ನೇತೃತ್ವದ ಕಾಂಗ್ರೆಸ್ ಈ ಸಲಹೆಯನ್ನು ಮಾತುಗಳಲ್ಲಿ ಒಪ್ಪಿಕೊಳ್ಳುತ್ತಿಲ್ಲ. ಆದರೆ ಎರಡು ಕಾಂಗ್ರೆಸ್‌ಗಳ ವಿಲೀನ ಆಗಬೇಕೆಂಬ ಕರೆಗೂ ಇದೇ ಅರ್ಥವೇ ಬರುತ್ತದೆ. ಅವರ ಸ್ನೇಹಿತರಾದ ಚಂದ್ರಜಿತ್‌ಯಾದವ್, ಕರಣ್‌ಸಿಂಗ್, ರಘುನಾಥ ರೆಡ್ಡಿ ಮತ್ತು ದೇಶದಲ್ಲಿನ ಇತರರು ಕೇರಳದ ಈ ಸ್ನೇಹಿತರ ಸಲಹೇಗೆ ಒಪ್ಪುವರೇನೋ ತಿಳಿದುಕೊಳ್ಳಬೇಕು.

ಮೂರು ಪರ್ಯಾಯಗಳು:

ತಮ್ಮ "ವಾಮವಾದಿ ಛಾಯೆ"ಯನ್ನು ಉಳಿಸಿಕೊಳ್ಳಲು ಹೆಣಗುವ ಕಮ್ಯುನಿಸ್ಟ್ ಪಕ್ಷ ಮತ್ತು ಕೇರಳ ಆರ್. ಎಸ್. ಪಿ. ಗಳಿಗೆ ಮೂರು ಪರ್ಯಾಯಗಳು (alternatives) ಎದುರಿಗಿವೆ.

ಮೊದಲನೆಯದಾಗಿ ತಮ್ಮ ಸಮ್ಮಿಶ್ರರಂಗದ ಜನಪ್ರಿಯ ಬೆಂಬಲ ಕಳೆದುಹೋಗಿರುವುದನ್ನು ಒಪ್ಪಿಕೊಂಡು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜೊತೆ ಸಹಕರಿಸಿ, "ಶುದ್ಧ ಹಲಗೆಯ ಮೇಲೆ" ಆರಂಭಿಸಬೇಕಾದರೆ, ಮಂತ್ರಿಮಂಡಲದ ರಾಜೀನಾಮೆ ಕೊಟ್ಟು, ಹೊಸ ಸಮ್ಮಿಶ್ರರಂಗದ ಆಧಾರದ ಮೇಲೆ ಮತದಾರರಿಗೆ ಮನವಿ ಮಾಡಬೇಕು. ಈ ಸಮ್ಮಿಶ್ರರಂಗವು "ಸರ್ವಾಧಿಕಾರ ಮತ್ತು ಆರೆಸ್ಸೆಸ್ ಮುಂತಾದ ಕೋಮುವಾದಿ ಶಕ್ತಿಗಳವಿರುದ್ಧ ಹೋರಾಡಲು ಹೊಸ ರಂಗವೊಂದನ್ನು ರಚಿಸಲು ಮುಂದೆ ಬರುವ ಆಳುವರಂಗ ಮತ್ತು ವಿರೋಧಿ ರಂಗಗಳೆರಡರಲ್ಲೂ ಇರುವ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ" ಮಿಶ್ರಣವಾಗಿರಬೇಕು.

ಅಥವಾ, 1977ರ ಚುನಾವಣೆಯನ್ನು ಗೆದ್ದ, ಆದರೆ 1978ರ ಕಾಂಗ್ರೆಸ್ ಒಡಕಿನ ನಂತರ ಬಿರುಕು ಬಿಟ್ಟ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಿರೋಧಿ ಸಮ್ಮಿಶ್ರರಂಗದ ಪುನರುಜ್ಜೀವನಕ್ಕೆ ಸಂಬಂಧಿಸಿದ ಕೇರಳದಲ್ಲಿನ ಕಾಂಗ್ರೆಸ್ (ಐ) ನಾಯಕತ್ವದ ಕರೆಯನ್ನು ಒಪ್ಪಿಕೊಳ್ಳುವುದು.

ಅಥವಾ, ಅಧಿಕಾರದಲ್ಲಿ ಹೇಗಾದರೂ ಇರಬೇಕು ಎಂಬ ಆಸೆಯನ್ನು ಬಿಟ್ಟರೆ ಉನ್ನತವಾದ ಧ್ಯೇಯವಾವುದನ್ನೂ ಹೊಂದಿರದ ಆಳುವ ಗುಂಪಾದ ಸಧ್ಯದ ಸಮ್ಮಿಶ್ರರಂಗದಲ್ಲಿ ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಮುಂದುವರೆಯುವುದು.

ಕಮ್ಯುನಿಸ್ಟ್ ಪಕ್ಷ ಮತ್ತು ಕೇರಳದಲ್ಲಿ ಅದರ ಮಿತ್ರನಾದ ಆರ್. ಎಸ್. ಪಿ. ಗಳು ಪರಿಸ್ಥಿತಿಗೆ ಪ್ರತಿಕ್ರಿಯೆ ಮಾಡಲು ಮೂರು ಪರ್ಯಾಯಗಳಲ್ಲಿ ಯಾವುದನ್ನು ಆಯ್ಕೆ ಮಾಡುತ್ತವೆ ಎಂಬುದನ್ನು ದೇಶದಲ್ಲಿನ ಎಡ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಯ ಸ್ನೇಹಿತರು ಎಚ್ಚರಿಕೆಯಿಂದ ಗಮನಿಸುತ್ತಾರೆ.

(ಇದನ್ನು ಬರೆದಾದ ನಂತರ, 1970 ರಿಂದ 74 ರೊಳಗೆ ನೀಡಲಾದ ಭೂ ಉಡುಗೊರೆ ವರ್ಗಾವಣೆಗಳನ್ನು ಕಾನೂನುಬದ್ಧ ಮಾಡುವಂಥ ಮಸೂದೆಯನ್ನು ಒಂದು ವಾರದೊಳಗೆ ಹೊರಡಿಸಲಾಗುವುದೆಂದು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಕೇರಳದ ಮುಖ್ಯಮಂತ್ರಿಗಳು ಭರವಸೆ ನೀಡಿರುವರೆಂದು ವರದಿಯಾಗಿದೆ. ಮಾರ್ಕ್ಸ್‌ವಾದಿ ವಿರೋಧಿ ಸಮ್ಮಿಶ್ರವನ್ನು ಮುಂದುವರೆಸುವುದಕ್ಕೋಸ್ಕರ "ಅಲ್ಪಸಂಖ್ಯಾತರ ರಕ್ಷಣೆಯ" ಹೆಸರಿನಲ್ಲಿ ಭೂಮಾಲೀಕ ಹಿತಾಸಕ್ತಿಗಳನ್ನು ಸಂತೋಷಪಡಿಸುವ ಕ್ರಮವಾಗಿದೆಯೆಂಬುದು ಸ್ಪಷ್ಟವಾಗಿದೆ. ಮಾತುಗಳಲ್ಲಿ ವ್ಯಕ್ತಪಡಿಸದೆ ಇದ್ದರೂ, ಇದು 1970ರ ಮಾರ್ಕ್ಸ್‌ವಾದಿ ವಿರೋಧಿ ರಂಗವನ್ನು ಪುನರುಜ್ಜೀವನಗೊಳಿಸಲು ಕಾಂಗ್ರೆಸ್ (ಐ) ನಾಯಕ ಕರುಣಾಕರನ್ ನೀಡಿದ ಸಲಹೆಯ ಅಂಗೀಕಾರವೂ ಆಗಿದೆ) ಇದು ಪ್ರಕಟವಾಗುವಷ್ಟರಲ್ಲಿ ಈ ಮಸೂದೆಗೆ ರಾಜ್ಯಪಾಲರ ಒಪ್ಪಿಗೆಯೂ ದೊರೆತಿದೆ).

ರಿಕ್ಷಾ ಚಾಲಕರ ಮತ್ತು ಮಾಲಕರ ಸಭೆ

ಇದೇ ತಾ. 19-6-79 ರಂದು ಮಧ್ಯಾಹ್ನ 3ಗಂಟೆಗೆ ಸರಿಯಾಗಿ ದ.ಕ. ಜಿಲ್ಲಾ ರಿಕ್ಷಾ ಚಾಲಕರ ಮತ್ತು ಮಾಲಕರ ಸಂಘದ ಸರ್ವಸದಸ್ಯರ ಸಭೆಯು ಬೋಳಾರ ಟೈಲ್ ವರ್ಕರ್ಸ್ ಯೂನಿಯನ್ ಆಫೀಸಿನಲ್ಲಿ ಕಾಂ. ಪಿ. ರಾಮಚಂದ್ರರಾವ್ ರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕ ರಾಜ್ಯ ಸರಕಾರವು ಇತ್ತೀಚೆಗೆ ಪಾಸುಮಾಡಿದ ರಿಕ್ಷಾದರಗಳ ಬಗ್ಗೆ ಸುದೀರ್ಘವಾದ ಚರ್ಚೆ ನಡೆಸಿ ಈ ಕೆಳಗಿನ ತೀರ್ಮಾನಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಠರಾವು. 1.

ಕರ್ನಾಟಕ ರಾಜ್ಯಸರಕಾರವು ಪ್ರಕಟ ಮಾಡಿದ ಕನಿಷ್ಟ ದರ ರೂ. 1ನ್ನು, ಹೊರೆಯ ವಿಷಯದಲ್ಲಿ 10 ಕೆ ಜಿ ಗೆ ಹತ್ತು ಪೈಸೆಯಂತೆ ನಿರ್ಧರಿಸಿರುವುದನ್ನು ಮತ್ತು ಓವರ್ ಟೈಮ್ ದರವನ್ನು ನಿರ್ಧರಿಸಿರುವುದನ್ನು ಈ ಸಭೆಯು ಸ್ವಾಗತಿಸುತ್ತದೆ.

ಠರಾವು. 2.

ಆದರೆ, ಅದೇ ಸಮಯದಲ್ಲಿ ರನ್ನಿಂಗ್ ಕಿ. ಮಿ. ಗೆ ಬೆಂಗಳೂರು ಬಿಟ್ಟು ಉಳಿದ ನಗರಗಳಲ್ಲಿ ಟು ಅಂಡ್ ಫ್ರೊ ಟ್ರಾಫಿಕ್ ಇಲ್ಲದ್ದುದರಿಂದ ಕಡಿಮೆ ಪಕ್ಷ 0.75 ಪೈಸೆ ಕೊಡಲಾಗುವುದು ಎಂದು ಬರವಸೆ ಕೊಟ್ಟ ಪ್ರಕಾರ ಕರ್ನಾಟಕ ರಾಜ್ಯ ಸರಕಾರವು ನಡೆದುಕೊಳ್ಳದುದರ ಬಗ್ಗೆ ಸಭೆಯು ತೀರಾ ವಿಷಾದಪಡುತ್ತದೆ. ಆದಕಾರಣ ರಿಕ್ಷಾಚಾಲಕರ ಮತ್ತು ಮಾಲಕರ ಸರ್ವಸದಸ್ಯರ ಸಭೆಯು ನಾವು ಮೀಟರ್ ಹಾಕಿ ಗಾಡಿಗಳನ್ನು ಚಲಿಸಬೇಕೆಂದು ಸರಕಾರವು ನಿರ್ಧರಿಸಿದಂತೆ ಕನಿಷ್ಟ 1 ರೂಪಾಯಿಯನ್ನು ಮಾತ್ರ ವಸೂಲಿಮಾಡಬೇಕೆಂದು, ರನ್ನಿಂಗ್ ಕಿ.ಮಿ. ಗೆ 0.50 ಪೈಸೆಯ ಬದಲು 0.75 ಪೈಸೆಯಂತೆ ತೆಗೆದುಕೊಳ್ಳಲು ಅನುಮತಿ ಈಯಬೇಕೆಂದು ಸರಕಾರವನ್ನು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯಿತು.

ಠರಾವು. 3

ರನ್ನಿಂಗ್ ಕಿ. ಮಿ.ಗೆ 0.75 ಪೈಸೆಯಂತೆ ವಸೂಲಿ ಮಾಡುವ ಬಗ್ಗೆ ಒಂದು ಕಾರ್ಡನ್ನು ತಯಾರಿಸಿ ಎಲ್ಲಾ ರಿಕ್ಷಾ ಕಾರ್ಮಿಕರಿಗೆ ಕೊಡಬೇಕೆಂದೂ, ಅವರು ಒಂದೇ ದರದಲ್ಲಿ ಮೀಟರು ಚಾಲು ಮಾಡಿ ಎಲ್ಲಾ ಜನರ ಸಹಕಾರವನ್ನು ಪಡೆಯಲು ಮುಂದಾಗಬೇಕೆಂದೂ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಶಾಂತರೀತಿಯಲ್ಲಿ ಶಿಸ್ತಿನಿಂದ ರಿಕ್ಷಾಗಳ "ಬಂದ್" ಆಚರಣೆ ಮಾಡಿ ನಗರದಲ್ಲಿ ಮೆರವಣಿಗೆ ತೆಗೆದು ಜಿಲ್ಲಾಧಿಕಾರಿಗಳವರಿಗೂ, ಪೋಲೀಸ್ ಅಧಿಕಾರಿಗಳವರಿಗೂ ಆರ್.ಟಿ.ಒ. ರವರಿಗೂ ಮನವಿ ಕೊಟ್ಟುದರ ಕುರಿತು ಸರ್ವಸದಸ್ಯರ ಸಭೆಯು ಸಂತೋಷವನ್ನು ವ್ಯಕ್ತಪಡಿಸಿತು.

ಶಾಂತಿ, ಶಿಸ್ತು ಮತ್ತು ಕ್ರಮಗಳಿಂದ ಸಾರ್ವಜನಿಕರ ಸಹಕಾರ ಸಹಾನುಭೂತಿಯನ್ನು ಗಳಿಸಲು ರಿಕ್ಷಾ ಚಾಲಕರೂ ಮಾಲಕರೂ ಶ್ರಮಿಸಬೇಕೆಂದು ಸಭೆಯು ಎಲ್ಲಾ ಚಾಲಕ ಮಾಲಕರನ್ನು ವಿನಂತಿಸಿದೆ.

●

"ಪ್ರತಿವರ್ಷವೂ ನಮ್ಮ ಜಾತಿಗಳು ಬದಲಾಗುತ್ತವೆಯೇ ?"

ಆದಾಯ ಸರ್ಟಿಫಿಕೇಟ್ ಪಡೆಯಬೇಕಾದಾಗ ತಾಲ್ಲೂಕು ಕಛೇರಿಗಳಲ್ಲಿ ವಿದ್ಯಾರ್ಥಿಗಳು ತೆರಬೇಕಾದ ದಂಡ, ಪಡಬೇಕಾದ ಬವಣೆಯನ್ನು ನಿವಾರಿಸಲು ಮತ್ತು ಪ್ರತಿವರ್ಷವೂ ಜಾತಿ ಸರ್ಟಿಫಿಕೇಟ್‌ಗಳನ್ನು ನೀಡಬೇಕೆಂಬ ನಿಯಮವನ್ನು ವಿರೋಧಿಸಿ ಜೂನ್ 18ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಯಚೂರು ಘಟಕವು ವಿದ್ಯಾರ್ಥಿಗಳ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತ್ತು. ಈಗ ಈ ಚಳುವಳಿಯು ಜಿಲ್ಲೆಯ ಗಂಗಾವತಿ ಮತ್ತು ಸಿಂಧನೂರು ತಾಲ್ಲೂಕುಗಳಿಗೆ ಹಬ್ಬಿದ್ದು ವಿದ್ಯಾರ್ಥಿಗಳ ಸಹಿ ಸಂಗ್ರಹ ಮಾಡಿ ಮೆರವಣಿಗೆಯಲ್ಲಿ ತಹಶೀಲ್ದಾರ್‌ರವರಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಗಿದೆ. ಸಿಂಧನೂರು ತಾಲ್ಲೂಕು ಶಾಖೆಯು ಹೊರಡಿಸಿರುವ ಕರಪತ್ರದಲ್ಲಿ ಮೇಲಿನ ಪ್ರಶ್ನೆಯನ್ನು ಕೇಳಲಾಗಿದ್ದು "ಸರ್ಕಾರವು ಈ ರೀತಿ ಅನವಶ್ಯಕ ನಿಯಮಗಳನ್ನು ಮಾಡಿ ಬಡ ವಿದ್ಯಾರ್ಥಿಗಳಿಂದ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆಹೊಡೆಯುತ್ತಿದೆ" ಎಂದು ತಿಳಿಸಿದೆ. ಈ ಸಮಸ್ಯೆಗಳಿಗೆ ಪರಿಹಾರ ಕಾಣಲು ಜಿಲ್ಲಾದ್ಯಂತ ಬಲಿಷ್ಟ ಚಳುವಳಿ ನಡೆಸಲು ದಿನೇ ದಿನೇ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಸಂಘಟಿತರಾಗುತ್ತಿದ್ದಾರೆಂದು ಜಿಲ್ಲಾ ಸಮಿತಿ ಅಧ್ಯಕ್ಷ ಕಾಂ.ಶ್ಯಾಮಸುಂದರ್ ತಿಳಿಸಿದ್ದಾರೆ. ○

........ಚರಿತ್ರಾರ್ಹ ರ್‍ಯಾಲಿಯ ಎಚ್ಚರಿಕೆ

[5ನೇ ಪುಟದಿಂದ]

ಮತ್ತು ಪಕ್ಷಗಳಿಗೆ ಇದೆ ಎಂಬುದನ್ನು ಅವರು ಸ್ಪಷ್ಟಪಡಿಸಿದರು.

ಕೆಲವು ಏಕಸ್ವಾಮ್ಯದ ಹಿಡಿತದಲ್ಲಿರುವ ವಾರ್ತಾಪತ್ರಿಕೆಗಳ ಅಗೌರವಯುತ ಪಾತ್ರವನ್ನು ಖಂಡಿಸುತ್ತಾ, ವಾಮರಂಗ ಸರ್ಕಾರಕ್ಕೆ ಪತ್ರಿಕಾ ಸ್ವಾತಂತ್ರ್ಯವನ್ನು ಕಬಳಿಸುವ ಆಶೆಯಿಲ್ಲ ಎಂದು ಅವರು ಹೇಳಿದರು. ಇದಕ್ಕೆ ಬದಲಾಗಿ, ಕೆಟ್ಟಭಾಷೆಯಲ್ಲೇ ಆದರೂ ಆರೋಗ್ಯಕರ ವಿಮರ್ಶೆಯನ್ನು ಮಾಡಿದರೆ, ಅದರಿಂದ ಪಾಠ ಕಲಿಯಲು ಸಿದ್ಧರಿದ್ದೇವೆ ಎಂದರು. ಆದರೆ ಯಾವುದೇ ವಾರ್ತಾಪತ್ರಿಕೆ, ಸರ್ಕಾರವನ್ನು ಇಳಿಸುವ ಉದ್ದೇಶದಿಂದ ಪ್ರೇರಿತವಾಗಿ ಸುಳ್ಳುಸುದ್ದಿ ಮತ್ತು ಅಪಸುದ್ದಿಗಳನ್ನು ಹರಡತೊಡಗಿದರೆ, ಅದನ್ನು ಖಂಡಿಸುವ ಮತ್ತು ಸತ್ಯವನ್ನು ಜನತೆಯ ಎದುರಿಗಿಡುವ ಹಕ್ಕೂ ವಾಮರಂಗ ಸರ್ಕಾರ ಮತ್ತು ಪಕ್ಷಗಳಿಗೆ ಇದೆ ಎಂದು ಅವರು ನುಡಿದರು.

ರ್‍ಯಾಲಿಯನ್ನು ಉದ್ದೇಶಿಸಿ ನಿಖಿಲ್ ದಾಸ್ (ಆರ್.ಎಸ್.ಪಿ.), ಅಶೋಕ್ ಘೋಷ್ (ಫಾರ್ವರ್ಡ್ ಬ್ಲಾಕ್), ಸುಧೀನ್ ಕುಮಾರ್(ಆರ್.ಸಿ.ಪಿ.ಐ.), ರಾಮ್‌ಚಟರ್ಜಿ (ಫಾರ್ವರ್ಡ್ ಬ್ಲಾಕ್ ಮಾರ್ಕ್ಸ್‌ವಾದಿ) ಮತ್ತು ಸುನಿಲ್ ಚೌಧುರಿ (ವಿಪ್ಲವಿ ಬಂಗ್ಲಾ ಕಾಂಗ್ರೆಸ್) ಅವರುಗಳು ಮಾತನಾಡಿದರು.

ರ್‍ಯಾಲಿಯು ಜನತೆಯಲ್ಲಿ ಹಿಂದೆಂದೂ ಇಲ್ಲದಿದ್ದ ಕುತೂಹಲವನ್ನು ತುಂಬಿತು. ಎಲ್ಲರೂ ರ್‍ಯಾಲಿ ನಡೆದ ಸ್ಥಳಕ್ಕೆ ಬರಲಾಗಲಿಲ್ಲ. ಅಸಮರ್ಪಕ ರೈಲು ಸಾಗಾಟದಿಂದ ಮತ್ತು ಹೌರಾ-ಬುರ್ಧ್ವಾನ್‌ನಲ್ಲಿ ನಡೆದ ಅಪಘಾತದಿಂದ ರೈಲು ಸಂಚಾರ ಸ್ಥಗಿತಗೊಂಡಿದ್ದರಿಂದ ಮತ್ತು ವಿಪರೀತ ನೂಕುನುಗ್ಗಲು ಇದ್ದುದರಿಂದ ಸಾವಿರಾರು ಜನರು ವಿವಿಧ ಸ್ಟೇಷನ್ನುಗಳಲ್ಲೇ ಉಳಿದುಬಿಡುವಂತಾಯಿತು. ಅವರು ನಿಂತ ಸ್ಟೇಷನ್ನುಗಳಲ್ಲೇ ಸಭೆಸೇರಿ ವಾಮರಂಗ ಸರ್ಕಾರಕ್ಕೆ ತಮ್ಮ ದೃಢ ಬೆಂಬಲವನ್ನು ವ್ಯಕ್ತಪಡಿಸಿದರು. ರಾಣಾಘಾಟ್ ಸ್ಟೇಷನ್ನಿನಲ್ಲಿ ನಡೆದ ಅಂಥ ಸಭೆಯಲ್ಲಿ ಹತ್ತುಸಾವಿರ ಜನರು ಭಾಗವಹಿಸಿದ್ದರು.

ವಾಮರಂಗ ಸರ್ಕಾರದ ವಿರುದ್ಧದ ಪಿತೂರಿಗಳನ್ನು ವಿರೋಧಿಸುವ ಚಳುವಳಿಯ ಒಂದು ಮುಖದ ಶಿಖರಪ್ರಾಯವಾಗಿ ಜೂನ್ 2ರ ರ್‍ಯಾಲಿ ನಡೆಯಿತು. ಅದಕ್ಕೆ ಮುಂಚೆ, ರಾಜ್ಯದ ಎಲ್ಲಾ ಕಡೆಯಲ್ಲೂ ಅಸಂಖ್ಯಾತ ಸಭೆಗಳು, ಮೆರವಣಿಗೆಗಳು ನಡೆದಿದ್ದವು. ಯಾವ ಪಟ್ಟಣ, ಜಿಲ್ಲೆ ಅಥವಾ ಸಬ್ ಡಿವಿಜನ್‌ನಲ್ಲಿ ಕೂಡ ನಡೆಯದೆ ಇರಲಿಲ್ಲ. ವಾಮರಂಗದ ಪಕ್ಷಗಳು ಮತ್ತು ಇತರ ವಾಮವಾದಿ ಸಾಮೂಹಿಕ ಸಂಸ್ಥೆಗಳು ಏರ್ಪಡಿಸಿದ್ದ ಈ ಸಭೆಗಳು ಮತ್ತು ಮೆರವಣಿಗೆಗಳಲ್ಲಿ ಎಲ್ಲ ಕಡೆಯಲ್ಲೂ ಜನರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದರು. ಈ ಎಲ್ಲ ಪ್ರಯತ್ನಗಳ ಫಲವಾಗಿ, ಜನತೆಯನ್ನು ದಾರಿ ತಪ್ಪಿಸಲು ಪ್ರತಿಗಾಮಿ ಶಕ್ತಿಗಳು ನಡೆಸಿದ್ದ ದುಷ್ಟ ಮತ್ತು ಪೂರ್ವಯೋಜಿತ ಪ್ರಚಾರಗಳನ್ನು ಉರುಳಿಸಲು ಸಾಧ್ಯವಾಯಿತು.

ಜೂನ್ ಎರಡರ ರ್‍ಯಾಲಿಯೊಡನೆ ಚಳುವಳಿ ಮುಗಿಯುವುದಿಲ್ಲ. ಇನ್ನೂ ಹೆಚ್ಚು ಭರದಿಂದ ಚಳುವಳಿಯನ್ನು ಮುಂದುವರೆಸಬೇಕೆಂದು ಅಲ್ಲಿ ತೀರ್ಮಾನಿಸಲಾಗಿದೆ. ವಾಮರಂಗ ಸರ್ಕಾರ ಮತ್ತು ಅದರ 36 ಅಂಶಗಳ ಕಾರ್ಯಕ್ರಮವನ್ನು ಬೆಂಬಲಿಸಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಪ್ರಚಾರದಳಗಳು, ಮೆರವಣಿಗೆಗಳು, ಸಭೆಗಳನ್ನು ಏರ್ಪಡಿಸುವಂತೆ ಜನತೆಗೆ ಕರೆ ನೀಡಲಾಗಿದೆ. ಕಾರ್ಯಕ್ರಮದ ಜಾರಿಯ ಚಳುವಳಿಯನ್ನು ಇನ್ನೂ ಬಲಪಡಿಸಲಾಗುತ್ತದೆ. ●

ರಾಯಚೂರು ಕೃಷಿಕಾರ್ಮಿಕರ ಹೋರಾಟ

ತಾ. 11-6-79 ರಿಂದ ರಾಯಚೂರು ಕೃಷಿಸಂಶೋಧನ ಕೇಂದ್ರದ 170ಕ್ಕೂ ಹೆಚ್ಚು ಕೃಷಿಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆ. ಮುಷ್ಕರವನ್ನು ಮುರಿಯಲು ಆಡಳಿತವರ್ಗದವರು, ವಿದ್ಯಾರ್ಥಿಗಳನ್ನು ಕೆಲಸಕ್ಕೆ ಉಪಯೋಗಿಸುವ ತಂತ್ರ ವಿಫಲವಾಗಿದ್ದು, ವಿದ್ಯಾರ್ಥಿಗಳು ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡುತ್ತಿದ್ದಾರೆ. ಇದರಿಂದಾಗಿ 9 ದಿನ ಬಿತ್ತನೆ ಕೆಲಸ ನಿಂತಿತ್ತು.

ಆಡಳಿತ ವರ್ಗದವರು ಕೆಲವು ಮಹಿಳಾ ಕಾರ್ಮಿಕರನ್ನು ಕೆಲಸಕ್ಕೆ ಬರುವಂತೆ ಒತ್ತಾಯಿಸಿದರಿಂದ ಹಾಗೂ ಇತರ ಅಸಂಘಟಿತ ಕಾರ್ಮಿಕರ ಬೆಂಬಲವಿಲ್ಲದಿರುವುದರಿಂದ ಮುಷ್ಕರವನ್ನು ತಾ. 30-6-79 ರಂದು ಹಿಂತೆಗೆದುಕೊಳ್ಳಲಾಗಿದೆ.

ಈ ಮಧ್ಯೆ, ಎಲ್ಲಾ ಕೃಷಿಕಾರ್ಮಿಕರು, ಮಹಿಳೆಯರ ಸಹಿತ ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಯವರಿಗೆ ಮನವಿ ಅರ್ಪಿಸಿದ್ದಾರೆ. ನಾಲ್ಕಾರು ಮೈಲಿ ನಡೆದು ಬಂದು ಮೆರವಣಿಗೆಯಲ್ಲಿ ಭಾಗವಹಿಸಿದ ಕಾರ್ಮಿಕರನ್ನು ಉದ್ದೇಶಿಸಿ ಕಾಂ. ಬಾಳ್ ಹಾಗೂ ಕಾಂ. ಪುರುಷೋತ್ತಮ ಕಲಾಲಬಂಡಿಯವರು ಅಸಂಘಟಿತರ ಸಂಘಟನೆಗೆ ಕರೆ ನೀಡಿದರಲ್ಲದೆ, ಕಾರ್ಮಿಕರು, ಬುದ್ಧಿಜೀವಿಗಳು ಹಾಗೂ ವಿದ್ಯಾರ್ಥಿಗಳು ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಕೇಳಿಕೊಂಡರು. ○

"ಧಾರವಾಡ ಕೃಷಿಕಾರ್ಮಿಕರ ವಿಜಯ"

ಸತತ 14 ದಿನಗಳಿಂದ ಸಂಪು ನಡೆಸಿ ಹೋರಾಟ ಮಾಡಿದ ಕೃಷಿ ಕಾರ್ಮಿಕರು ತಾ. 25 ರಂದು ಕೃಷಿ ವಿಶ್ವವಿದ್ಯಾಲಯ ಆಡಳಿತವರ್ಗ ಹಾಗೂ ಕಾರ್ಮಿಕರ ನಡುವೆ ಆದ ಮಾತುಕತೆಯಿಂದ ದಿನಗೂಲಿಯನ್ನು 50 ಪೈಸೆಗೆ ಏರಿಸುವುದಾಗಿಯೂ ಹಾಗೂ ಔಷದೋಪಚಾರಗಳ ಸೌಲಭ್ಯ ಒದಗಿಸುವುದಾಗಿಯೂ ಭರವಸೆ ಕೊಟ್ಟಾಗ ಸಂಪನ್ನು ಹಿಂತೆಗೆದುಕೊಂಡರು.

ಸಂಪಿನ ಮಾತುಕತೆಗಳು ದಿನಾಂಕ 22 ಹಾಗೂ 23 ರಂದೂ ದೀರ್ಘವಾಗಿ ಚರ್ಚಿಸಲ್ಪಟ್ಟು ಆಡಳಿತವರ್ಗದವರ ಹಠಸ್ವಭಾವದಿಂದ ಬೇಡಿಕೆಗಳು ಈಡೇರದಾದಾಗ ತಾ. 25 ರಂದು ಕಾರ್ಮಿಕರು ಸಂಪನ್ನು ತೀವ್ರಗೊಳಿಸಿದರು. ಇದನ್ನು ಕಂಡು ಅಂಜಿದ ಆಡಳಿತವರ್ಗದವರು ಕೆಲವು ಬೇಡಿಕೆಗಳನ್ನು ಈಡೇರಿಸುವುದಾಗಿ ಉಳಿದ ಬೇಡಿಕೆಗಳನ್ನು ಪರಿಶೀಲಿಸುವುದಾಗಿಯೂ ಭರವಸೆಯಿತ್ತಾಗ ಸಂಪನ್ನು ಹಿಂತೆಗೆದುಕೊಂಡರು.

ಉಳಿದ ಬೇಡಿಕೆಗಳನ್ನು ಬೇಗನೆ ಈಡೇರಿಸಬೇಕೆಂದು ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಜಿ. ಎ. ಹಿರೇಮಠ ಅವರು ನೋಟೀಸ್ ಕೊಟ್ಟು ಬಂದಿದ್ದಾರೆ.

ಈ ಸಂಪಿನಿಂದ ಕಾರ್ಮಿಕರು ಕೂಲಿ ಹೆಚ್ಚಳ ಪಡೆದದ್ದು ಸ್ವಲ್ಪವೇ ಆದರೂ ಸಂಘಟನೆ, ಒಗ್ಗಟ್ಟು, ಹೋರಾಟದ ಬಗ್ಗೆ ಕಾರ್ಮಿಕರಿಗೆ ದೃಢನಂಬಿಕೆ ಬಂದಿದೆ. ಅಲ್ಲದೇ ಹೋರಾಟದಿಂದ ಏನನ್ನಾದರೂ ಸಾಧಿಸಬಹುದೆಂದು ಕಾರ್ಮಿಕರಿಗೆ ಮನವರಿಕೆಯಾಯಿತು. ಅಲ್ಲದೇ ತಮ್ಮ ಜಯ ತಮ್ಮ ಹೋರಾಟದಿಂದಲೇ ಹೊರತು ಆಳುವ ವರ್ಗದ ದಯೆಯಿಂದಲ್ಲ ಎಂದು ಕಾರ್ಮಿಕರಿಗೆ ಮನವರಿಕೆಯಾಯಿತು.

14 ದಿನಗಳವರೆಗೆ ನಡೆದ ಸಂಪು ಶಾಂತಯುತವಾಗಿತ್ತು ; ಯಶಸ್ವಿಯಾಯಿತು ; ಕಾರ್ಮಿಕರ ಜಯವಾಗಿತ್ತು.

●

ಕುಂದಾಪುರ ಎಸ್.ಎಫ್.ಐ. ಸಭೆ

ಭಾರತ ಸ್ಟೂಡೆಂಟ್ಸ್ ಫೆಡರೇಶನಿನ ಕುಂದಾಪುರತಾಲ್ಲೂಕು ಸಮಿತಿಯು 24-6-1979 ರಂದು ಕೋಣಿ ಗ್ರಾಮದಲ್ಲಿ ಸಭೆ ಸೇರಿತು. ಶ್ರೀ ಕೆ. ಶಂಕರ್ ರವರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಇಂದು ಸಮಾಜವನ್ನು ಕೊರೆಯುತ್ತಲಿರುವ ಆರ್ಥಿಕ ಹಾಗು ರಾಜಕೀಯ ಸಮಸ್ಯೆಗಳು ಸಮಾಜದ ಒಂದು ಅಂಗವಾದ ವಿದ್ಯಾರ್ಥಿ ಸಮುದಾಯವನ್ನು ಕಾಡುತ್ತಿರುವ ಕುರಿತು, ಅವೈಜ್ಞಾನಿಕ ಸಿದ್ಧಾಂತಗಳನ್ನು ಪ್ರತಿನಿಧಿಸುವ ಪಾಠ ಪ್ರವಚನಗಳಿಂದಾಗಿ ಇಂದಿನ ಶಾಲಾ ಕಾಲೇಜುಗಳು ಕೇವಲ ಬೆಲೆಯಿಲ್ಲದ ಪದವೀಧರರನ್ನು ತಯಾರಿಸುವ ಕಾರಖಾನೆಗಳಾಗಿ ಪರಿವರ್ತಿಸಲ್ಪಟ್ಟಿರುವ ದುಸ್ಥಿತಿಯ ಕುರಿತು ಮತ್ತು ಇಂತಹ ಶಾಲಾ ಕಾಲೇಜುಗಳಿಂದ ಹೊರಬರುವ ವಿದ್ಯಾರ್ಥಿ ಸಮೂಹ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ವಿದ್ಯಾರ್ಥಿ ಸಮುದಾಯದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸಾಮೂಹಿಕ ಹೋರಾಟ ತರಲು ನೆರವಾಗುವಂತೆ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಸಂಘಟಿಸಲು ನಿರ್ಧರಿಸಲಾಯಿತು.

ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ತತ್ವಾದರ್ಶಗಳ

[7ನೇ ಪುಟ ನೋಡಿ]

ಅಂಚೆ-ತಂತಿ ಇಲಾಖೆಯಲ್ಲಿ ಬೇಡಿಕೆ ದಿನಾಚರಣೆ

ಕರ್ನಾಟಕ ರಾಜ್ಯ ವೃತ್ತದ ಅಂಚೆ ತಂತಿ ಕಾರ್ಮಿಕರ ಸಂಘದ ನಿರ್ದೇಶನದಂತೆ ಮಂಗಳೂರು ತಂತಿ ವಿಭಾಗದ ಕಾರ್ಮಿಕರು ಬೇಡಿಕೆದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಿದರು. ಘೋಷಣೆಗಳನ್ನು ಕೂಗುತ್ತಾ ನಡೆದು, 18 ಬೇಡಿಕೆಗಳ ಮನವಿಯನ್ನು ಸಂಘದ ಅಧ್ಯಕ್ಷ ಶ್ರೀ ಬಿ. ರಾಮಕೃಷ್ಣ ಅವರ ನೇತೃತ್ವದಲ್ಲಿ ಅಧಿಕಾರಿಗಳಿಗೆ ಅರ್ಪಿಸಿ, ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯಿತು. ನಂತರ ನಡೆದ ಸಭೆಯಲ್ಲಿ ಬಿ.ರಾಮಕೃಷ್ಣ, ಸುಂದರಗೌಡ, ಚೆಲುವರಾಜ, ಪೌಲೋಸ್, ಪರೇಶ ಪೂಜಾರಿ ಅವರು ಮಾತನಾಡಿದರು.

ನೌಕರರ ಖಾಯಂ ಉದ್ಯೋಗ ಭದ್ರತೆ, ಕನಿಷ್ಟವೇತನ, ಇಲಾಖೆಯಿಂದ ಪರಿಚಯ ಪತ್ರ ನೀಡಿಕೆ, ಹನ್ನೆರಡು ದಿನಗಳ ಸಾಂದರ್ಭಿಕರಜೆ, ನೌಕರರ ವಜಾ ನಿಲ್ಲಿಸುವಿಕೆ, ಹಿರಿತನಕ್ಕನುಗುಣವಾಗಿ ಬಡ್ತಿ, ಓವರ್‌ಟೈಂ ಭತ್ಯ ಮತ್ತು ಇತರ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಲಾಗಿದೆ.

○

ಕಡ್ಡಾಯ ಠೇವಣಿ ಪಾವತಿ ತಡೆಹಿಡಿದಿದ್ದರ ಖಂಡನೆ

ಹಣದುಬ್ಬರವನ್ನು ತಡೆಗಟ್ಟುವ ನೆಪವೊಡ್ಡಿ ಭಾರತ ಸರ್ಕಾರವು ಕಡ್ಡಾಯ ಠೇವಣಿಯ ಮರುಪಾವತಿಯನ್ನು ಒಂದು ವರ್ಷ ಮುಂದೂಡಿ, ಭಾರತದ ಕಾರ್ಮಿಕವರ್ಗದ ಅತೃಪ್ತಿಯನ್ನು ಹೆಚ್ಚಿಸಿದೆ

ಇದೇ ನೆಪದಿಂದ ಹಿಂದಿನ ಕಾಂಗ್ರೆಸ್ ಸರ್ಕಾರವು ಕಡ್ಡಾಯ ಠೇವಣಿ ಯೋಜನೆಯನ್ನು ಜಾರಿಗೆ ತಂದಿತು. ಅನುಭವವು ಅವರ ನಿರೀಕ್ಷೆಯನ್ನು ಸುಳ್ಳಾಗಿಸಿತು. ಕಾಂಗ್ರೆಸ್ ಪಕ್ಷದ ಅದೇ ಹಳೆಯ ದಿವಾಳಿಕೋರ ಬಂಡವಾಳಶಾಹಿ ಆರ್ಥಿಕ ನೀತಿಯನ್ನು ಅನುಸರಿಸುತ್ತಿರುವ ಜನತಾ ಸರ್ಕಾರವು ಬೆಳೆಯುತ್ತಿರುವ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನಸಮುದಾಯದ ಮೇಲೆ ಹೇರ ಹೊರಟಿದೆ.

ಭಾರತ ಸರ್ಕಾರವು ತನ್ನ ಆಜ್ಞೆಯನ್ನು ರದ್ದುಮಾಡಿ, ಬಾಕಿಯಾಗಿರುವ ಕಡ್ಡಾಯ ಠೇವಣಿಯ ಕಂತುಗಳನ್ನು ತುರ್ತಾಗಿ ಪಾವತಿ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ. ಮತ್ತು ಈ ಹೇಳಿಕೆಯ ಈಡೇರಿಕೆಗಾಗಿ ಕಾರ್ಮಿಕ ನೌಕರರು ನಡೆಸುವ ಎಲ್ಲಾ ಹೋರಾಟಗಳನ್ನು ಬೆಂಬಲಿಸುತ್ತೇವೆ ಎಂದು ಸಿ. ಐ. ಟಿ. ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಹೇಳಿಕೆ ಇತ್ತಿರುವರು.

ಮೈಸೂರು ನಗರ ಪೌರ ಕಾರ್ಮಿಕರ ಮುಷ್ಕರ

ಮೈಸೂರು ನಗರಸಭೆಯನ್ನು ನಗರ ಸಮಿತಿಯನ್ನಾಗಿ ಪರಿವರ್ತಿಸಿ ಹಲವಾರು ವರ್ಷಗಳೇ ಕಳೆದಿವೆ; ಆದರೆ ಪುರಜನರಿಗಾಗಲಿ ಪೌರಕಾರ್ಮಿಕರಿಗಾಗಲೀ ಏನೂ ಪ್ರಯೋಜನ ದೊರೆತಿಲ್ಲ. ರಸ್ತೆ, ನಲ್ಲಿ, ದೀಪಗಳ ಕೊರತೆ ಇದ್ದು, ನಗರಸಭೆ ಕಚೇರಿ ಮತ್ತು ಆಸ್ಪತ್ರೆಗಳಲ್ಲಿ ಲಂಚಗುಳಿತನ ಹೆಚ್ಚಾಗುತ್ತಿದೆ. ಮೈಸೂರು ನಗರ ಕಾರ್ಮಿಕರ ಮೇಲೆ ಕೆಲಸದ ಹೊರೆ ಹೆಚ್ಚಿದೆ. ಇವೆಲ್ಲವನ್ನು ಗಮನಿಸಿ 17-7-79 ರಿಂದ ಪೌರಕಾರ್ಮಿಕರು ಮುಷ್ಕರ ಹೂಡುತ್ತಿದ್ದಾರೆ.

1971 ರಿಂದ ನಿವೃತ್ತರಾದವರಿಗೆ ಗ್ರಾಚುಯಿಟಿ, 1972 ರಿಂದ ನಿವೃತ್ತರಾದವರಿಗೆ ನಿವೃತ್ತಿ ವೇತನ, ಪೌರ ಕಾರ್ಮಿಕರ ಮನೆ ರಿಪೇರಿ, ಮುಂತಾದ ಬೇಡಿಕೆಗಳನ್ನು ಮುಷ್ಕರದಲ್ಲಿ ಒತ್ತಾಯಿಸಲಾಗುತ್ತದೆ.

○

ಚಿಕ್ಕಬಳ್ಳಾಪುರದಲ್ಲಿ ಪಂಜಿನ ಮೆರವಣಿಗೆ

ಚಿಕ್ಕಬಳ್ಳಾಪುರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಂಗವಾದ ಕೃಷಿ ಕಾರ್ಮಿಕರ ಸಂಘದ ಕೆಲಸಗಾರರು ತಾ. 4-7-79 ರಂದು ರಾತ್ರಿ ಎಂಟು ಗಂಟೆಗೆ, ಸೀಮೆಎಣ್ಣೆ ಅಭಾವವನ್ನು ಪ್ರತಿಭಟಿಸಿ ಪಂಜಿನ ಮೆರವಣಿಗೆ ನಡೆಸಿತು. ಸೀಮೆಎಣ್ಣೆ ವ್ಯಾಪಾರಿಗಳು ಮತ್ತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಕೆಂಪುಬಾವುಟ ಮತ್ತು ಪಂಜುಗಳನ್ನು ಹಿಡಿದು ಪ್ರದರ್ಶನ ನಡೆಸಿದರು. ಮೆರವಣಿಗೆಯ ನಾಯಕತ್ವವನ್ನು ಎಸ್. ಲಕ್ಷ್ಮಯ್ಯ, ಕಾಂತರಾಜು, ಅನಂತ್, ನಾರಾಯಣಸ್ವಾಮಿ, ಗೋಪಾಲ್, ವೆಂಕಟೇಶ್, ಸಂಜಮ್ಮ, ಅಶ್ವತ್ಥಮ್ಮ ಇವರುಗಳು ವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾಂ. ಲಕ್ಷ್ಮಯ್ಯನವರು ಮಾತನಾಡಿ, ಸೀಮೆಎಣ್ಣೆಗೆ ಬ್ಲಾಕ್‌ಮಾರ್ಕೆಟ್‌ದರ ಕೊಡಬೇಕಾದ ಈ ಪರಿಸ್ಥಿತಿಯ ವಿರುದ್ಧ ಹೋರಾಡಬೇಕೆಂದು ಕಾರ್ಮಿಕರಲ್ಲಿ ಮನವಿಮಾಡಿದರು. ○

ಬ್ಯಾಂಕ್ ನೌಕರರ ಹೋರಾಟಕ್ಕೆ ಸಿ.ಐ.ಟಿ.ಯು. ಬೆಂಬಲ

ರಿಜರ್ವ್‌ಬ್ಯಾಂಕ್ ನೌಕರರ ಮುಷ್ಕರವನ್ನು ನಿಷೇಧಿಸಿ, ಕೆಲವು ಕಡೆ ಅವರ ಮುಖಂಡರನ್ನು ಬಂಧಿಸಿ, ಅವರ ಬೇಡಿಕೆಗಳನ್ನು ಟ್ರಿಬ್ಯೂನಲ್‌ಗೆ ಒಪ್ಪಿಸುವುದರ ಮೂಲಕ ಜನತಾಪಕ್ಷದ ಕೇಂದ್ರ ಸರ್ಕಾರವು ಕಾರ್ಮಿಕವರ್ಗದ ಸಾಮೂಹಿಕ ಚೌಕಾಶಿಯ ಹಕ್ಕನ್ನು ಮೊಟಕುಗೊಳಿಸಹೊರಟಿದೆ.

ಕೇಂದ್ರದ ಈ ಕ್ರಮದಿಂದ ಪ್ರೇರಿತರಾದ ಬೆಂಗಳೂರಿನ ರಿಜರ್ವ್ ಬ್ಯಾಂಕ್ ಅಧಿಕಾರಿಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ ನ್ಯಾಯಸಮ್ಮತವಾದ ಟಿ. ಯು. ಚಟುವಟಿಕೆಗಳಾದ ಸಾಮೂಹಿಕ ನಿಯೋಗ, ಸಾಮೂಹಿಕ ಪ್ರದರ್ಶನ ಮೊದಲಾದ ಕ್ರಮಗಳನ್ನು ಪ್ರತಿಬಂಧಿಸುವ ಆಜ್ಞೆಯನ್ನು ನ್ಯಾಯಾಲಯದಿಂದ ಪಡೆದುಕೊಂಡಿದ್ದಾರೆ.

ಕೇಂದ್ರ ಸರ್ಕಾರದ ಮತ್ತು ರಿಜರ್ವ್ ಬ್ಯಾಂಕ್ ಅಧಿಕಾರಿಗಳ ಈ ಕಾರ್ಮಿಕ ವಿರೋಧಿ ಕ್ರಮಗಳನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ, ನೌಕರರಿಗೆ ಸಂಪೂರ್ಣ ಟ್ರೇಡ್‌ಯೂನಿಯನ್ ಹಕ್ಕುಗಳನ್ನು ಕೊಡಬೇಕು, ಎಂದು ಒತ್ತಾಯಪಡಿಸಿ, ರಿಜರ್ವ್ ಬ್ಯಾಂಕ್ ನೌಕರರು ನಡೆಸುವ ಚಳುವಳಿಗೆ ಮತ್ತು ಅವರ ಬೇಡಿಕೆಗಳಿಗೆ ಬೆಂಬಲಕೊಡುತ್ತೇವೆ ಎಂದು ಸಿ. ಐ. ಟಿ. ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಹೇಳಿಕೆ ಇತ್ತಿರುವರು. ○

ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಮಾವೇಶ

ಜುಲೈ 19 ಮತ್ತು 20 ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮಾವೇಶ ಬೆಂಗಳೂರಲ್ಲಿ ನಡೆಯುತ್ತದೆ. ಈ ಸಮಾವೇಶದಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿರುವ ಸರ್ಕಾರಿ ಕ್ಷೇತ್ರದ ಕಾರ್ಮಿಕ ಮುಖಂಡರುಗಳೂ, ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರುಗಳೂ ಭಾಗವಹಿಸಲಿರುವರು. ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿ, ಎಂ.ಪಿ ಇವರು ಪ್ರಮುಖ ಅತಿಥಿಗಳಲ್ಲೊಬ್ಬರು. ಈ ಸಮಾವೇಶದಲ್ಲಿ ಬ್ಯಾಂಕ್ ಮತ್ತು ವಿಮಾ ನೌಕರರ ಫೆಡರೇಶನ್‌ಗಳು ಸಹಾ ಭಾಗವಹಿಸುವುವು.

ಕುಂದಾಪುರ ಎಸ್. ಎಫ್. ಐ. ಸಭೆ

[6ನೇ ಪುಟದಿಂದ]

ಮೇಲೆ ನೆಲೆಯೂರಿರುವ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ ಕುಂದಾಪುರ ತಾಲ್ಲೂಕು ಸಮಿತಿ (1979-80) ಗೆ ಅಧ್ಯಕ್ಷರನ್ನಾಗಿ ಶ್ರೀ ಗಣೇಶ್ ಕಾರಂತ್, 3ನೇ ಬಿ. ಕಾಂ., ಉಪಾಧ್ಯಕ್ಷರಾಗಿ ಶ್ರೀ ಶ್ರೀನಿವಾಸ್ ದೇವಡಿಗ, 2 ನೇ ಬಿ.ಎ., ಕಾರ್ಯದರ್ಶಿಯಾಗಿ ಶ್ರೀ ಆರ್. ಜಯಕುಮಾರ್, 3 ನೇ ಬಿ. ಕಾಂ. ಮತ್ತು ಜೊತೆ ಕಾರ್ಯದರ್ಶಿಯಾಗಿ ಶ್ರೀ ನಾಗೇಂದ್ರ ಕೆ. 2 ನೇ ಪಿ. ಯು. ಸಿ. ಆರಿಸಲ್ಪಟ್ಟರು. ಶ್ರೀ ಉದಯ ಕುಮಾರ್, ಶ್ರೀ ಬಾಬು ಕೆ. ಶ್ರೀ ಗಣಪತಿ ನಾಯ್ಕ್, ಶ್ರೀ ನಾರಾಯಣ ಆಚಾರ್ಯ, ಶ್ರೀ ಕೆ. ಸುರೇಶ್ ಮತ್ತು ಶ್ರೀ ಶಿವಾನಂದ ಕೋಡಿ ಇವರುಗಳು ಇರುವ ಒಟ್ಟು 10 ಮಂದಿಯ ಸಮಿತಿಯನ್ನು ರಚಿಸಲಾಯಿತು. ○

......ಇದು ನಮ್ಮ ಸರ್ಕಾರ ಎಂದು

[2ನೇ ಪುಟದಿಂದ]

ಬಿಕ್ಕಟ್ಟಿನಿಂದಾಗಿ ತತ್ತರಿಸಿ ಹೋಗಿರುವ ವಾಮರಂಗ ಸರ್ಕಾರವು ಮಧ್ಯಮ ವರ್ಗಕ್ಕಾಗಿ ಹೆಚ್ಚಿನದೇನನ್ನೂ ಮಾಡಲಾಗುತ್ತಿಲ್ಲ. ಈ ವಿದ್ಯುತ್ ಬಿಕ್ಕಟ್ಟೂ ಸಹ ಹಿಂದೆ ಆಳ್ವಿಕೆ ನಡೆಸಿದ ಕಾಂಗ್ರೆಸ್ಸಿಗರ ಬಳುವಳಿ. ಅವರು ಸರಿಯಾಗಿ ಯೋಜನೆಗಳನ್ನು ಹಾಕದೆ ಇದ್ದದ್ದು ಇಂದಿನ ವಿದ್ಯುತ್ ಕ್ಷಾಮಕ್ಕೆ ಕಾರಣ. ಈ ಎಲ್ಲ ಕಾರಣಗಳನ್ನೂ ವಾಮರಂಗ ಸರ್ಕಾರ ತನ್ನ ಜನತೆಗೆ ಹೇಳುತ್ತಿದೆ. ಇವರ (ಮಧ್ಯಮ ವರ್ಗ) ಈ ಬೇಡಿಕೆಗಳಿಗೂ ಸರ್ಕಾರ ಗಮನ ನೀಡುತ್ತಿದೆ. 1982ರ ಹೊತ್ತಿಗೆ ರಾಜ್ಯದ ಬೇಡಿಕೆಗಾಗುವಷ್ಟು ವಿದ್ಯುತ್ ಉತ್ಪಾದನೆಗೆ ಅದು ಕ್ರಮವಹಿಸುತ್ತಿದೆ. ಅಲ್ಲಿಯವರೆಗೂ ಮಧ್ಯಮವರ್ಗದ ತಾಳ್ಮೆಯ ಒಂದು ಪರೀಕ್ಷೆಯೇ ನಡೆಯಲಿದೆ.

"ಸಂಡೆ" ಆಧಾರದಿಂದ

ಶಂಕರ ಲಾಳಪುರ.

ಬಂದರ ಕಾರ್ಮಿಕರ 28ನೇ ವಾರ್ಷಿಕ ಮಹಾಸಭೆ

ತಾ. 6-7-1979ನೇ ಶುಕ್ರವಾರ ಮಧ್ಯಾಹ್ನ ಘಂಟೆ 2-30ಕ್ಕೆ ಸರಿಯಾಗಿ ಮಂಗಳೂರು ಬಂದರ ವರ್ಕರ್ಸ್ ಯೂನಿಯನ್ನಿನ 28ನೇ ಮಹಾಸಭೆಯು ಕಾಂ. ಕಮಲಾಕ್ಷ ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಂ. ಮಾರಪ್ಪ ರೈಯವರು ಸಭೆಯನ್ನು ಸ್ವಾಗತಿಸಿ, ಸಭೆಯ ಮುಂದೆ ಯೂನಿಯನ್ನಿನ ಚಟುವಟಿಕೆಯ ವರದಿಯನ್ನು ಇತ್ತರು. ವರದಿಯು ಮಂಜೂರಾದ ಬಳಿಕ 1978ನೇ ಸಾಲಿನ ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟು ಲೆಕ್ಕಪತ್ರವು ಸರ್ವಾನುಮತದಿಂದ ಮಂಜೂರಾಯಿತು.

ಕೆಶ್ಯೂನಟ್ ಆಂಡ್ ಎಲ್ಲೈಡ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಜಾನಮ್ಮ, ಬೀಡಿಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಜಿ. ವೀರಪ್ಪ, ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಬಿ. ಉಮಾನಾಥ್ ಮತ್ತು ಸಿ. ಐ. ಟಿ. ಯು. ಜಿಲ್ಲಾ ಸಮಿತಿಯ ಸದಸ್ಯ ಕಾಂ. ಬಿ. ವಿಷ್ಣುಮೂರ್ತಿ ಮೊದಲಾದವರು ಭಾಷಣ ಮಾಡಿದರು.

ಮುಂದಿನ ವರ್ಷಕ್ಕೆ ಕಾಂ. ಕೆ. ಮೂಸಬ್ಬರವರು ಅಧ್ಯಕ್ಷರಾಗಿಯೂ, ಕಾಂ. ಪಿ. ರಾಮಚಂದ್ರರಾವ್ ಉಪಾಧ್ಯಕ್ಷರಾಗಿಯೂ, ಕಾಂ. ಮಾರಪ್ಪ ರೈ ಪ್ರಧಾನ ಕಾರ್ಯದರ್ಶಿಯವರಾಗಿಯೂ, ಕಾಂ. ಕಮಲಾಕ್ಷ ಬಂಗೇರ ಜೊತೆ ಕಾರ್ಯದರ್ಶಿಯವರಾಗಿಯೂ, ಕಾಂ. ಬಾಬುಶೆಟ್ಟಿಯವರು ಕೋಶಾಧಿಕಾರಿಯನ್ನೊಳಗೊಂಡ 30 ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯ್ತು.

ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘಟನೆಯ ಕುಂದುಕೊರತೆಗಳನ್ನು ಹೋಗಲಾಡಿಸಿ ಬೆಳೆಯುತ್ತಿರುವ ಮಂಗಳೂರು ಬಂದರಿನಲ್ಲಿ ಪ್ರಭಲವಾದ ಸಿ. ಐ. ಟಿ. ಯು. ಸಂಘಟನೆಯನ್ನು ಕಟ್ಟಲು ಮುಂದಾಗಬೇಕೆಂದು ಕರೆಯಿತ್ತರು.

●

ಕ್ರಾಂತಿಯ ಮೊದಲ ಹೆಜ್ಜೆಗಳಲ್ಲಿ ಆಫ್ಘಾನಿಸ್ತಾನ

[3ನೇ ಪುಟದಿಂದ]

ಸಾಕಷ್ಟು ಸಾಧನೆಗಳಿಸಿದೆ. ಅಲಿಪ್ತ ಚಳುವಳಿಯ ಸದಸ್ಯನಾಗಿ ಆಫ್ಘಾನಿಸ್ತಾನದ ಪ್ರಜಾಪ್ರಭುತ್ವವಾದಿ ಗಣರಾಜ್ಯದ ಪ್ರತಿಷ್ಠೆ ಹೆಚ್ಚುತ್ತಿದೆ. ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ದೇಶಗಳ ಜೊತೆಗಿನ ಅದರ ಬಹುಮುಖವಾದ ಬಾಂಧವ್ಯಗಳು ಚೆನ್ನಾಗಿ ಅಭಿವೃದ್ಧಿಯಾಗಿ ಹೊಸ ರೂಪ ಪಡೆಯುತ್ತಿವೆ.

●

ಕಾರ್ಮಿಕರ ಮುಷ್ಕರಕ್ಕೆ ಜಯ

ಬೆಂಗಳೂರು ದ್ರಾಕ್ಷಿ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಮೈಸೂರು ಶಾಖೆಯ ಕೆಲಸಗಾರರು 11-6-79 ರಿಂದ ಮುಷ್ಕರ ನಡೆಸುತ್ತಿದ್ದು, 27-6-79 ರಿಂದ ಅನಿರ್ದಿಷ್ಟಕಾಲ ಉಪವಾಸ ಮುಷ್ಕರ ನಡೆಸುತ್ತಿದ್ದರು. ಕೊನೆಗೆ 2-7-79 ರಂದು ಮೈಸೂರು ಜಿಲ್ಲೆಯ ಲೇಬರ್ ಆಫೀಸರ್ ಅವರ ಸಮ್ಮುಖದಲ್ಲಿ

[8ನೇ ಪುಟ ನೋಡಿ]

......ನಮ್ಮ ಮುಂದಿರುವ ಕರ್ತವ್ಯಗಳು

[ಒಂದನೇ ಪುಟದಿಂದ]

ಆದರೆ ಈ ಮೇಲೆ ಹೇಳಿದ ಸಾಧನೆಗಳಿಂದ ನಾವು ತೃಪ್ತರಾಗಿ ಕೂರುವುದು ಸಾಧ್ಯವಿಲ್ಲ. ತೀವ್ರವಾಗಿ ಬದಲಾಗುತ್ತಿರುವ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಮತ್ತು ತೀವ್ರವಾಗಿ ಬಿಗಡಾಯಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಶ್ರಮಜೀವಿಗಳನ್ನು ಸಂಘಟಿಸುವುದರಲ್ಲೂ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸುವುದರಲ್ಲೂ ನಮ್ಮ ಪಾತ್ರವನ್ನು ವಹಿಸಬೇಕು. ಪಕ್ಷದ ರಾಜಕೀಯ ಜವಾಬ್ದಾರಿಯನ್ನು ನಿರ್ವಹಿಸಬೇಕಾದಲ್ಲಿ ಮತ್ತು ಇಂದಿನ ಅನುಕೂಲ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಪಕ್ಷವನ್ನು ತೀವ್ರಗತಿಯಲ್ಲಿ ಬೆಳೆಸಬೇಕಾದರೆ ನಮ್ಮ ಸಂಘಟನಾ ದೋಷಗಳನ್ನು ಹೋಗಲಾಡಿಸಬೇಕು. ಸಾಲ್ಕಿಯಾದಲ್ಲಿ ಸೇರಿದ ಪಕ್ಷದ ಪ್ಲೀನಮ್‌ನ ಸಂಘಟನಾ ನಿರ್ಣಯಗಳು ನೂರಕ್ಕೆನೂರು ನಮ್ಮ ರಾಜ್ಯದ ಸಂಘಟನಾ ಪರಿಸ್ಥಿತಿಗೆ ಅನ್ವಯವಾಗುತ್ತವೆ. ಬಲಿಷ್ಟವಾದ ಮತ್ತು ರಾಜ್ಯದ ಜನಜೀವನದಲ್ಲಿ ಮಧ್ಯಪ್ರವೇಶಮಾಡುವ ಹಾಗೂ ರಾಜಕೀಯವಾಗಿ ಮಾರ್ಗದರ್ಶನ ಮಾಡುವ ಪಕ್ಷದ ರಾಜ್ಯಸಮಿತಿಯ ಕೇಂದ್ರ; ಸಂಘಟನೆಯಲ್ಲಿ ಈ ಹಿಂದಿನಿಂದ ಬೆಳೆದು ಬಂದ ಅರಾಜಕತೆ, ವೈಯುಕ್ತಿಕತೆ, ನೌಕರಶಾಹಿತ್ವ ಮೊದಲಾದುವುಗಳನ್ನು ಸಂಪೂರ್ಣ ಹೋಗಲಾಡಿಸಿ ಸಾಮೂಹಿಕ ನಾಯಕತ್ವ ಮತ್ತು ಶಿಸ್ತನ್ನು ತುಂಬುವುದು; ಪಕ್ಷದ ಸದಸ್ಯರುಗಳ ಸೈದ್ಧಾಂತಿಕ ಮತ್ತು ರಾಜಕೀಯ ತಿಳುವಳಿಕೆಯ ಮಟ್ಟವನ್ನು ಉತ್ತಮಗೊಳಿಸುವುದು; ಪಕ್ಷದ ಎಲ್ಲಾ ಸಮಿತಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದು; ಕಾರ್ಯಕರ್ತರರಿಗೆ ಸರಿಯಾದ ತರಬೇತಿಯನ್ನು ನೀಡುವುದು; ಪಕ್ಷದ ಪತ್ರಿಕೆ ಮತ್ತು ಸಾಹಿತ್ಯವನ್ನು ವ್ಯವಸ್ಥಿತವಾಗಿ ದೊಡ್ಡ ರೀತಿಯಲ್ಲಿ ಮಾರಾಟ ಮತ್ತು ಪ್ರಚುರಗೊಳಿಸುವುದು; ಸ್ವಯಂ ಟೀಕೆ ಮತ್ತು ಟೀಕೆಗಳನ್ನು ಸಂಘಟನಾ ಚೌಕಟ್ಟಿನೊಳಗೆ ನಡೆಸಲು ಉತ್ತೇಜನವಿತ್ತು ತಪ್ಪುಗಳನ್ನು ತಿದ್ದಿ ಪಕ್ಷದ ಐಕ್ಯತೆಯನ್ನು ಬಲಗೊಳಿಸುವುದು ಮೊದಲಾದ ತುರ್ತು ಕೆಲಸಗಳಿಗೆ ಆದ್ಯತೆಯನ್ನೀಯಬೇಕಾಗಿದೆ. ಪಕ್ಷದ "ಪ್ಲೀನಮ್‌ನಲ್ಲಿ ಹೇಳಿದಂತೆ ಹಳಬರಿಗೆ ಹೊಸ ವಿದ್ಯಾಭ್ಯಾಸ ಮತ್ತು ಹೊಸಬರಿಗೆ ಸರಿಯಾದ ವಿದ್ಯಾಭ್ಯಾಸವನ್ನೀಯಬೇಕಾಗಿದೆ". ಪಕ್ಷದ ರಾಜ್ಯಸಮಿತಿಯಿಂದ ಪ್ರಾರಂಭಗೊಂಡು ಸಾಮಾನ್ಯ ಸದಸ್ಯನ ತನಕ ಸರಿಯಾದ ತಿಳುವಳಿಕೆ ಮತ್ತು ಹೊಸ ದೃಷ್ಟಿಕೋಣವನ್ನು ತುಂಬುವುದು ಅವಶ್ಯವಿದೆ.

ಹಿಂದಿನ ಗೊಂದಲಗಳನ್ನು ಹೋಗಲಾಡಿಸಿ ಮುನ್ನಡೆಯಲು ಸಾಧ್ಯವಾಗಿರುವ ಈ ಪರಿಸ್ಥಿತಿಯಲ್ಲಿ ಮೇಲಿನ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಜಾರಿಗೊಳಿಸುವುದಕ್ಕೆ ಪಕ್ಷದ ರಾಜ್ಯ ಸಮಿತಿಯು ಮುಂದಾಗಿರುವುದು. ಈ ಬಗ್ಗೆ ನಿರ್ದಿಷ್ಟ ಕಾರ್ಯಕ್ರಮಗಳನು ರಾಜ್ಯಸಮಿತಿಯು ಹಾಕಲಿರುವುದು." ರಾಜ್ಯಸಮಿತಿಯ ಈ ಪ್ರಯತ್ನಗಳಿಗೆ ಎಲ್ಲಾ ಸದಸ್ಯರುಗಳ ಬೆಂಬಲ ದೊರೆತು. ನಾವು ಇನ್ನೂ ಬಲಿಷ್ಟವಾಗಿ ಶೀಘ್ರ ಮುನ್ನಡೆ ಸಾಧಿಸುವ ನಂಬಿಕೆ ನಮಗಿದೆ.

ಕಾರ್ಮಿಕರ ಮುಷ್ಕರಕ್ಕೆ ಜಯ

[7ನೇ ಪುಟದಿಂದ]

ಮಾತುಕತೆ ನಡೆದು, ಕೆಲಸಗಾರರ ಸಂಬಳದಲ್ಲಿನ ವ್ಯತ್ಯಾಸ, ವಜಾ ಆಗಿದ್ದ ಕೆಲಸಗಾರರ ವಾಪಸಾತಿ, ತರಕಾರಿ ಮತ್ತು ಹಣ್ಣುಗಳು ಕೊಳೆಯುವುದರಿಂದ ಉಂಟಾಗುವ ನಷ್ಟದ ಭರ್ತಿಯಲ್ಲಿ ಶೇಕಡಾ 5ರಷ್ಟು ಭಾಗದರಿಯಾಯಿತಿ, ಕೆಲಸಗಾರರನ್ನು ಖಾಯಂಗೊಳಿಸುವಿಕೆ, 4-7-79ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯನಿರ್ವಾಹಕ ಮಂಡಲಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವುದು, ಆ ಸಭೆಗೆ ಇಬ್ಬರು ಕೆಲಸಗಾರರನ್ನು ಕಳಿಸುವುದು- ಈ ಬೇಡಿಕೆಗಳು ಮತ್ತಿತರ ಬೇಡಿಕೆಗಳ ಬಗ್ಗೆ ತೀರ್ಮಾನ ಕೈಗೊಂಡನಂತರ ಮುಷ್ಕರವನ್ನು ಅಂತ್ಯಗೊಳಿಸಿ ಕೆಲಸಗಾರರೆಲ್ಲರೂ 3-7-79ರಿಂದ ಕೆಲಸಕ್ಕೆ ಹಾಜರಾಗಲು ಒಪ್ಪಿದ್ದಾರೆ. ಈ ಮಾತುಕತೆಗಳಲ್ಲಿ ಮೈಸೂರು ಜಿಲ್ಲಾ ಜನರಲ್ ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಎಂ. ಶೇಖರ್ ಮತ್ತು ಆಡಳಿತವರ್ಗದ ಪರವಾಗಿ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ಏಜೆಂಟರುಗಳಿಗೆ ಸೂಚನೆ

ಪ್ರತಿ ತಿಂಗಳ ಬಿಲ್ಲನ್ನು ಮುಂದಿನ ತಿಂಗಳ 15ನೇ ತಾರೀಖಿನೊಳಗೆ ಎಲ್ಲಾ ಏಜೆಂಟರುಗಳೂ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ. ಹಿಂದಿನ ಬಾಕಿಯನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡದಲ್ಲಿ ಏನೂ ಸೂಚನೆ ಇಲ್ಲದೆ ಪತ್ರಿಕೆ ಕಳುಹಿಸುವುದನ್ನು ನಿಲ್ಲಿಸಲಾಗುವುದು.

ಎಂ. ಕೆ. ಭಟ್
ಸಂಪಾದಕ.

ಪ್ಲಾಂಟೇಷನ್ ಯೂನಿಯನ್ ಸಮಿತಿ ವಿಸ್ತೃತ ಸಭೆ

ಕರ್ನಾಟಕ ಪ್ರಾವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು ತಾ. 2-7-79 ರಂದು ಚಿಕ್ಕಮಗಳೂರಿನಲ್ಲಿ ಉಪಾಧ್ಯಕ್ಷ ಎ.ಕೆ.ವಿಶ್ವನಾಥರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಘದ ಚಟುವಟಿಕೆಗಳ ಮೇಲೆ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಕೊಟ್ಟ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಎ.ಸಿ.ಕೇಶವ, ಕೆ.ಸುಕುಮಾರ್, ಮಯಿಂದ ಮೇಸ್ತ್ರಿ, ಪ್ಯಾರೂ ಸಾಹೇಬ್, ಶೀನ, ಕೃಷ್ಣಪ್ಪ, ಮತ್ತು ಚಂದ್ರ ಭಾಗವಹಿಸಿದ್ದರು. ಸಭೆಯು ವರದಿಯನ್ನು ಅಂಗೀಕರಿಸಿತು.

ತೋಟಕಾರ್ಮಿಕರ ವೇತನ ಪುನರ್ವಿಮರ್ಶೆಯ ಬಗ್ಗೆ ತೋಟ ಮಾಲೀಕರ ಸಂಘಗಳ ಮತ್ತು ಕಾರ್ಮಿಕ ಸಂಘಗಳ ನಡುವೆ ನಡೆಯುತ್ತಿರುವ ದ್ವಿಪಕ್ಷೀಯ ಮಾತುಕತೆಗಳಲ್ಲಿ ಸಂಘದ ಪ್ರತಿನಿಧಿಗಳು ತಳೆಯಬೇಕಾದ ನಿಲುಮೆಯನ್ನು ಸಭೆಯು ನಿರ್ಧರಿಸಿತು.

ಹಳಿಯಾಳ ಗೋಲಿಬಾರಿನ ಖಂಡನೆ:

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಸರ್ಕಾರಿ ಭೂಗ್ರಹಣ ಚಳುವಳಿಯಲ್ಲಿದ್ದ ರೈತರ ಮೇಲೆ ಪೋಲೀಸರು ನಡೆಸಿದ ಗೋಲಿಬಾರನ್ನು ಖಂಡಿಸಿ, ಈ ವಿಚಾರದಲ್ಲಿ ಸರ್ಕಾರವು ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕು ಎಂದು ಒತ್ತಾಯಪಡಿಸುವ, ರೈತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು, ಸರ್ಕಾರಿ ಭೂಮಿಯನ್ನು ಭೂಹೀನ ರೈತರಿಗೆ ಮುಫತ್ತಾಗಿ ಹಂಚಬೇಕು, ಮೃತರ ಕುಟುಂಬದವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯಪಡಿಸುವ, ಗೋಲಿಬಾರಿನಲ್ಲಿ ಅಸುನೀಗಿದ ಹುತಾತ್ಮ ಮಾರುತಿ ಪವಾರರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು

ಧಾರವಾಡದಲ್ಲಿರುವ ಕೃಷಿವಿಶ್ವವಿದ್ಯಾಲಯದ ಕೃಷಿ ಕಾರ್ಮಿಕರು ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲಸೂಚಿಸುವ, ಬೆಂಗಳೂರಿನ ದ್ರಾಕ್ಷಿ ಬೆಳೆಗಾರರ ಸಂಘದ ಮೈಸೂರು ಶಾಖೆಯ ನೌಕರರು ತಮ್ಮ ಬೇಡಿಕೆಗಳಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಕೊಡುವ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಶಿವಮೊಗ್ಗ ಎಸ್.ಎಫ್.ಐ. ನಿಂದ ಪತ್ರಿಕಾ ಹೇಳಿಕೆ

ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾದ ಶಿವಮೊಗ್ಗ ಶಾಖೆಯು ಕೆಳಕಂಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದೆ.

'ಬೇಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಭೂರಹಿತ ರೈತರಿಗೆ ವಿತರಣೆ ಮಾಡುತ್ತೇವೆ' ಎಂದು ಸರ್ಕಾರ ಘೋಷಿಸಿದ್ದರೂ ಅದನ್ನು ಕಾರ್ಯಗತಗೊಳಿಸದೆ ಇರುವುದು ವಿಷಾದನೀಯ. ಮೂರು ನಾಲ್ಕು ವರ್ಷಗಳಿಂದಲೂ ಮನವಿ ಸಲ್ಲಿಸಿ ನಂತರ ಹೋರಾಟ ನಡೆಸಿದ ಹಳಿಯಾಳದ ರೈತರನ್ನು ಬಂಧಿಸಿ ಗೋಲಿಬಾರ್ ಮಾಡಿದ ಪೋಲೀಸರನ್ನು ನಾವು ಖಂಡಿಸುತ್ತೇವೆ. ಬಂಧಿತರನ್ನು ಬಿಡುಗಡೆಗೊಳಿಸಬೇಕೆಂದು, ರೈತರಿಗೆ ಭೂವಿತರಣೆ ಮಾಡಬೇಕೆಂದು, ಗೋಳಿಬಾರಿನ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ನಾವು ಸರ್ಕಾರವನ್ನು ಒತ್ತಾಯಿಸುತ್ತೇವೆ.

ವರ್ಷವರ್ಷ ಜಾತಿ ಸರ್ಟಿಫಿಕೇಟನ್ನು ಕೊಡುವುದು ಅರ್ಥಹೀನ ಪದ್ಧತಿ, ಖಾಯಂ ಆದ ಸರ್ಟಿಫಿಕೇಟನ್ನು ಒಂದೇ ಬಾರಿಗೆ ಕೊಡುವ ಕ್ರಮ ಇರಬೇಕೆಂದು ಒತ್ತಾಯಿಸಿ ಗಂಗಾವತಿಯ ಎಸ್. ಎಫ್. ಐ. ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದ್ದಾರೆ. ಇದನ್ನು ಬೆಂಬಲಿಸಿ ಶಿವಮೊಗ್ಗ ಎಸ್. ಎಫ್. ಐ. ವಿದ್ಯಾರ್ಥಿಗಳನ್ನು ಅಭಿನಂದಿಸುತ್ತದೆ.

ಸಂಪಾದಕೀಯ

[ಒಂದನೇ ಪುಟದಿಂದ]

ಮೊರಾರ್ಜಿಯವರ ಸರಕಾರ ಉಳಿಯುವುದರ ಬಗ್ಗೆ ಸಂಶಯವಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೊ ಅವಿಶ್ವಾಸ ನಿರ್ಣಯದ ಬಗ್ಗೆ ತನ್ನ ನಿಲುವನ್ನು ನಿರ್ಣಯಿಸಲು ಇಂದು ಸೇರಿದೆ. ಸದ್ಯದ ತೀವ್ರಗತಿಯ ರಾಜಕೀಯ ಬೆಳವಣಿಗೆ, ಇದರಿಂದಾಗಿ ಮತ್ತು ತನ್ನ ನಿಲುಮೆಯಿಂದಾಗಿ ಸರ್ವಾಧಿಕಾರ ಮತ್ತು ಕೋಮುಶಕ್ತಿಗಳ ವಿರುದ್ಧದ ಒಂದು ಎಡ ಪ್ರಜಾಪ್ರಭುತ್ವರಂಗವನ್ನು ರಚಿಸಿ ಬೆಳೆಸಲು ಇರುವ ಸಾಧ್ಯಾಸಾಧ್ಯತೆಗಳನ್ನು ಗಮನಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ನಿಲುಮೆಯನ್ನು ನಿರ್ಣಯಿಸಲಿದೆ.

ಇಂದಿನ ಪರಿಸ್ಥಿತಿಯನ್ನು ನೋಡುವಾಗ ಅವಿಶ್ವಾಸ ನಿರ್ಣಯದ ಮೇಲೆ ಮತ ಚಲಾವಣೆ ನಡೆಯುವಷ್ಟರ ತನಕ ಮೊರಾರ್ಜಿಯವರ ಸರಕಾರ ಇರುವುದೇ ಎಂಬುದು ನಿಘಂಟಿಲ್ಲ. ಪರಿಸ್ಥಿತಿಯು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹತ್ತಿರ ಬರುವುದಕ್ಕೂ, ಇವುಗಳ ಬೆಳವಣಿಗೆಗೂ ಅನುಕೂಲವಿದ್ದರೂ, ಇದೇ ಸಂದರ್ಭ ಜನತೆಯು ಜಾಗರೂಕತೆಯಿಂದ ಇರದಿದ್ದರೆ ಸರ್ವಾಧಿಕಾರ ಶಕ್ತಿಗಳು ತಮ್ಮ ಸ್ಥಾನವನ್ನು ಭದ್ರಪಡಿಸುವ ಸಾಧ್ಯತೆಗಳೂ ಇವೆ.

ಪರಿಸರ

ಬುಡಕಟ್ಟು ಭೂಮಿಗಾಗಿ 5000 ಅರ್ಜಿಗಳಿರುವಾಗಲೇ ಸಿ.ಪಿ.ಐ. (ಎಂ) ತ್ರಿಪುರಾ ಸರ್ಕಾರದ ವಿರುದ್ಧ ಭೂಮಾಲೀಕ ಸಮೂಹ ಗುಸುಗುಸು ಪ್ರಾರಂಭಿಸಿತ್ತು. 500 ಅರ್ಜಿಗಳನ್ನು ಇತ್ಯರ್ಥಪಡಿಸಿದ ಸರ್ಕಾರ ಭೂ ಕೆರವು ಮಾಡಲು ಆಜ್ಞಾಪಿಸಿದುದು ಮತ್ತು ದೊಡ್ಡದೊಡ್ಡ ವ್ಯಾಪಾರಸ್ಥರು, ಬಡ್ಡಿ ವ್ಯಾಪಾರಸ್ಥರ ಮೇಲೆ ಹೆಚ್ಚಿನ ಒತ್ತಡ ತಂದುದು ಪಟ್ಟಭದ್ರ ಹಿತಾಸಕ್ತಿಗಳು ರೊಚ್ಚಿಗೇಳುವಂತೆ ಮಾಡಿತು.

—ಹಿಮ್ಮತ್.

ದಲಿತರನ್ನು ತುಳಿಯುವ ಕುರುಡು ನೀತಿ, ಸ್ವಜನ ಪಕ್ಷಪಾತ, ವ್ಯಾಪಕ ಪ್ರಮಾಣದ ಭ್ರಷ್ಟಾಚಾರ, ಈ ಸಾಮಾಜಿಕ ಪಾತಕಗಳ ನಿರ್ಮೂಲನವಾಗುವತನಕ ಪೋಲೀಸ್ ಇಲಾಖೆಯಿಂದ ಪ್ರಾಮಾಣಿಕ ಸೇವೆಯನ್ನು ಅಪೇಕ್ಷಿಸುವುದು ಶುದ್ಧ ಮೂರ್ಖತನವಾಗುವುದು.

—ಪೃಥ್ವಿ,
ವಾರಪತ್ರಿಕೆ.

ಹಸನ್ಮುಖಿ ಇಂದಿರಾಗಾಂಧಿ ಅವರನ್ನು ಮಾತ್ರ ದೇವರಾಜ ಅರಸು ಕಂಡಿರಬಹುದು. ಆದರೆ ಆಕೆ 'ಗಾಯಗೊಂಡ ಹೆಣ್ಣು ಹುಲಿ' ದ್ರೋಹಿಯ ಬಗ್ಗೆ ಮುಯ್ಯಿ ತೀರಿಸಿಕೊಳ್ಳಲು ಜುಲೈ 15ರಂದು ಬೆಂಗಳೂರಿಗೆ ಬರುತ್ತಿದ್ದಾರೆ. ಕರ್ನಾಟಕದ ಜನತೆ ಕುರಿಗಳೋ ಸಿಂಹಗಳೋ ನೋಡಬೇಕಾಗಿದೆ!

ಸಿ. ಎಂ. ಸ್ಟೀಫನ್.

ಜನತಾ ಕಾಂಗ್ರೆಸ್‌ಗಳಿಗೆ ಪರ್ಯಾಯವಾಗಿ ವಾಮಪಂಥೀಯರಂಗ ಕೇಂದ್ರದಲ್ಲೂ ಅಧಿಕಾರಕ್ಕೆ ಬರಬೇಕೆಂಬ ಕೇಳಿಕೆ ದೇಶದಲ್ಲಿಂದು ಹೆಚ್ಚುಹೆಚ್ಚಾಗಿ ಕೇಳಿಬರುತ್ತಿದೆ.

ಪೃಥ್ವಿ,
ವಾರಪತ್ರಿಕೆ.

ಇಡೀ ದೇಶದಲ್ಲಿ ಸ್ವಾತಂತ್ರ್ಯ ಯೋಧರ ಸಂಖ್ಯೆ 1 ಲಕ್ಷ 18 ಸಾವಿರವಾದರೆ ಬಿಹಾರ ರಾಜ್ಯದಲ್ಲೆ ಅತಿ ಹೆಚ್ಚು-18 ಸಾವಿರ ಸಂಖ್ಯೆಯಲ್ಲಿದ್ದಾರೆ. ಇಲ್ಲಿಯುವರೆವಿಗೆ ಒಂದು ಸಾವಿರಕ್ಕೂ ಹೆಚ್ಚು ಖೋಟಾ ಯೋಧರ ವಿಶ್ರಾಂತಿ ವೇತನವನ್ನು ರದ್ದುಪಡಿಸಲಾಗಿದೆ. ಇವರ ವಿಶ್ರಾಂತಿ ವೇತನಕ್ಕಾಗಿ ಪ್ರತಿವರ್ಷ 27 ಕೋಟಿ ರೂ. ವೆಚ್ಚವಾಗುತ್ತಿದೆ.

—ಧನಿಕ್‌ಮಂಡಲ್
ಕೇಂದ್ರ ಗೃಹರಾಜ್ಯಮಂತ್ರಿ. ಕನ್ನಡಪ್ರಭ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154